# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶನಿವಾರ, ಜೂನ್ 08, 2024

ಸಂಪುಟ : 51 ಸಂಚಿಕೆ : 25 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com









**ಮಳೆ..ಮಳೆ...!** ದಾವಣಗೆರೆಯಲ್ಲಿ ಶುಕ್ರವಾರ ಮಧ್ಯಾಹ್ನ ಸುರಿದ ಮಳೆಗೆ ಈರುಳ್ಳಿ ಮಾರುಕಟ್ಟೆ ಬಳಿಯ ರೈಲ್ವೇ ಕೆಳ ಸೇತುವೆಯಲ್ಲಿ ನೀರು ನಿಂತು ಸಂಚಾರಕ್ಕೆ ತೀವ್ರ ತೊಂದರೆಯಾಗಿತ್ತು.

## ನಾಳೆ ಸಂಜೆ ಮೋದಿ ಪ್ರಮಾಣ ವಚನ

ನವದೆಹಲಿ, ಜೂ. 7 – ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಹ್ವಾನ ನೀಡಿದ್ದಾರೆ.

ಮೋದಿ ಅವರು ಬಿಜೆಪಿ ಸಂಸದೀಯ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಹಾಗೂ ಎನ್.ಡಿ.ಎ. ನಾಯಕರು ಬೆಂಬಲ ನೀಡಿರುವ ಪತ್ರವನ್ನು ಬಿ.ಜೆ.ಪಿ. ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಮುರ್ಮು ಅವರಿಗೆ ಸಲ್ಲಿಸಿದರು. ನಂತರ ಮೋದಿ ಅವರನ್ನು ನಿಯೋಜಿತ ಪ್ರಧಾನಿಯಾಗಿ ನೇಮಿಸಲಾಗಿದೆ.

ಭಾನುವಾರ ಸಂಜೆ 7.15ರ ಸಮಯದಲ್ಲಿ ರಾಷ್ಟ್ರಪತಿ ಭವನದಲ್ಲಿ ನಡೆಯಲಿರುವ (2ನೇ ಪುಟಕ್ಕೆ)

## ಸಗಟು ಠೇವಣಿ ಮಿತಿ 3 ಕೋಟಿ ರೂ.ಗಳಿಗೆ ಹೆಚ್ಚಳ

ಮುಂಬೈ, ಜೂ. 7 - ಸಗಟು ಠೇವಣಿ ಮಿತಿಯನ್ನು ರಿಸರ್ವ್ ಬ್ಯಾಂಕ್ 3 ಕೋಟಿ ರೂ.ಗಳಿಗೆ ಹೆಚ್ಚಿಸಿದೆ. ಸಗಟು ಬ್ಯಾಂಕ್ ಠೇವಣಿಗಳು ಚಿಲ್ಲರೆ ಠೇವಣಿಗಳಿಗಿಂತ ಹೆಚ್ಚಿನ ಬಡ್ಡಿ ದರ ಹೊಂದಿರುತ್ತವೆ. (2ನೇ ಪುಟಕ್ಕೆ)

# ಬಹುಮತದೊಂದಿಗೆ ಸರ್ಕಾರ ಸರ್ವಮತದೊಂದಿಗೆ ದೇಶ

ನವದೆಹಲಿ, ಜೂ. 7 – ಮುಂದಿನ ಸರ್ಕಾರವನ್ನು ಸರ್ವ ಸಮ್ಮತಿಯೊಂದಿಗೆ ನಡೆಸಲು ಶ್ರಮಿಸುವುದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಬಿಜೆಪಿ ನೇತೃತ್ವದ ಎನ್.ಡಿ.ಎ. ನಾಯಕರಾಗಿ ಆಯ್ಕೆ ಮಾಡಿದ ನಂತರ ನೂತನ ಸಂಸದರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮೋದಿ, ಎನ್.ಡಿ.ಎ. ಅಧಿಕಾರಕ್ಕಾಗಿ ಕೆಲ ಪಕ್ಷಗಳು ರಚಿಸಿಕೊಂಡ ಒಕ್ಕೂಟವಲ್ಲ. ಇದು ದೇಶವೇ ಮೊದಲು ಎಂಬ ಸಿದ್ಧಾಂತದೊಂದಿಗೆ ಸಹಜತೆಯಿಂದ ರೂಪಿಸಿಕೊಂಡ ಒಕ್ಕೂಟವಾಗಿದೆ ಎಂದು ಹೇಳಿದರು.

ಆಡಳಿತಾರೂಢ ಮೈತ್ರಿಕೂಟವು ಸಂವಿಧಾನದ ಸರ್ವ ಪಂಥ ಸಮಭಾವ ತತ್ವ ಹಾಗೂ ಪರಸ್ಪರ ನಂಬಿಕೆಯನ್ನು ಆಧರಿಸಿ ಮುನ್ನಡೆಯಲಿದೆ ಎಂದೂ ಅವರು ಹೇಳಿದರು.



**ಮೈತ್ರಿ ಸರ್ಕಾರಗಳ ಇತಿಹಾಸದಲ್ಲೇ ನಮ್ಮ ಮೈತ್ರಿ ಬಲಿಷ್ಠ: ಮೋದಿ**

ಮೈತ್ರಿ ಸರ್ಕಾರಗಳ ಇತಿಹಾಸದಲ್ಲೇ ನಮ್ಮ ಮೈತ್ರಿಕೂಟವು ಅತ್ಯಂತ ಬಲಿಷ್ಠವಾಗಿದೆ ಎಂಬುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಕಳೆದ 30 ವರ್ಷಗಳಲ್ಲಿ ಎನ್.ಡಿ.ಎ. ಅತಿ ಹೆಚ್ಚು ಯಶಸ್ಸು ಗಳಿಸಿದ ಚುನಾವಣಾ ಪೂರ್ವ ಮೈತ್ರಿಕೂಟವಾಗಿದೆ. ಎನ್.ಡಿ.ಎ. ಈ ಹಿಂದೆ ಮೂರು ಸರ್ಕಾರಗಳನ್ನು ಪೂರ್ಣಗೊಳಿಸಿದೆ ಹಾಗೂ ನಾಲ್ಕನೆಯದರತ್ತ ಹೆಜ್ಜೆ ಹಾಕುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಸರ್ಕಾರ ರಚಿಸಲು ಬಹುಮತದ ಅಗತ್ಯವಿದೆ. ಆದರೆ, ದೇಶವನ್ನು ಮುನ್ನಡೆಸಲು ಸರ್ವಮತದ ಅಗತ್ಯವಿದೆ. ಜನತೆ ನಮಗೆ ಸರ್ಕಾರ ನಡೆಸಲು ಅಗತ್ಯವಾದ ಬಹುಮತ ನೀಡಿದ್ದಾರೆ. ನಿರಂತರವಾಗಿ ಸರ್ವಮತದೊಂದಿಗೆ ದೇಶ ಮುನ್ನಡೆಸು ವುದು ನಮ್ಮ ಜವಾಬ್ದಾರಿ ಎಂದು ಮೋದಿ ಹೇಳಿದರು.

ಎನ್.ಡಿ.ಎ. ಮೈತ್ರಿಕೂಟವು ಹೊಸ ಭಾರತ, ಅಭಿವೃದ್ಧಿ (2ನೇ ಪುಟಕ್ಕೆ)

# ಬಿತ್ತನೆ ಬೀಜ, ರಸಗೊಬ್ಬರ ಕೊರತೆಯಾಗದಂತೆ ನೋಡಿಕೊಳ್ಳಿ

### ಕೃಷಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಸೂಚನೆ



ದಾವಣಗೆರೆ ಜೂ. 7 - ಮುಂಗಾರು ಹಂಗಾಮು ಆರಂಭವಾಗಿದ್ದು ರೈತರಿಗೆ ಬೇಕಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆಯಾಗದಂತೆ ಕೃಷಿ ಅಧಿಕಾರಿಗಳು ನೋಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಸೂಚನೆ ನೀಡಿದರು.

ಅವರು ಇಂದು ನಗರದ ಕೃಷಿ ಇಲಾಖೆಯ ಆವರಣದಲ್ಲಿರುವ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಉಗ್ರಾಣದಲ್ಲಿ ದಾಸ್ತಾನು ಮಾಡಲಾದ ಬಿತ್ತನೆ ಬೀಜದ ಉಗ್ರಾಣ ಪರಿಶೀಲನೆ ನಡೆಸಿ, ರೈತರಿಗೆ ಬೀಜ ಗೊಬ್ಬರ ಕೊರತೆಯಾಗದಂತೆ ನೋಡಿಕೊಳ್ಳಿ ಎಂದು ಕೃಷಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರೈತ ಸಂಪರ್ಕ ಕೇಂದ್ರದಲ್ಲಿ ದಾಸ್ತನಾಗಿರುವ ಮೆಕ್ಕೆಜೋಳದ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಿ ಸ್ಥಳದಲ್ಲಿದ್ದ ರೈತರೊಂದಿಗೆ ಕೃಷಿಯ ಬಗ್ಗೆ ಹಾಗೂ ಕುಂದು ಕೊರತೆ ವಿಚಾರಿಸಿ, ನಂತರ ದಾವಣಗೆರೆ ನಗರದಲ್ಲಿರುವ ಕೇಂದ್ರ ಉಗ್ರಾಣ (2ನೇ ಪುಟಕ್ಕೆ)

## ಜಮೀನು ಕಬಳಿಸಲು ಮನೆಗೆ ಬೆಂಕಿ; ಎಸ್ಪಿ ಶಾಸಕನಿಗೆ ಜೈಲು

ಕಾನ್ಪುರ, ಜೂ. 7 – ಮಹಿಳೆಯೊಬ್ಬರಿಗೆ ಸೇರಿದ ಜಮೀನು ಕಬಳಿಸಲು ಅವರ ಮನೆಗೆ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಸಮಾಜವಾದಿ ಪಕ್ಷದ ಶಾಸಕ ಇರ್ಫಾನ್ ಸೋಳಂಕಿಗೆ ನ್ಯಾಯಾಲಯ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಇದರಿಂದಾಗಿ ಅವರು ಉತ್ತರ ಪ್ರದೇಶ ವಿಧಾನಸಭೆಯಿಂದ ಅನರ್ಹರಾಗಲಿದ್ದಾರೆ.

ಈ ಪ್ರಕರಣದಲ್ಲಿ ಇರ್ಫಾನ್ ಸಹೋದರ ರಿಜ್ವಾನ್ ಸೋಳಂಕಿ ಹಾಗೂ ಇತರೆ ಮೂವರಿಗೂ ಜೈಲು ಶಿಕ್ಷೆಯಾಗಿದೆ. ಒಂದೂವರೆ ವರ್ಷದ ಹಿಂದೆ ಇರ್ಫಾನ್ ಮತ್ತಿತರರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

## ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲುಗೈ

ಬೆಂಗಳೂರು, ಜೂ. 7 - ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಆರು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ.

ಆರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮೂರರಲ್ಲೂ, ಎನ್‌ಡಿಎ ಮೈತ್ರಿಕೂಟದ ಜೆಡಿಎಸ್ ಎರಡು ಹಾಗೂ ಬಿಜೆಪಿ ಒಂದರಲ್ಲಿ ಜಯಭೇರಿ ಬಾರಿಸಿದೆ.

ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಲೋಕಸಭಾ ಚುನಾವಣೆಯಲ್ಲಿ ಮತ ಕೇಳಿದ ಕಾಂಗ್ರೆಸ್‌ಗೆ ಅದರ ಲಾಭ ದೊರೆಯಲಿಲ್ಲ. ರಾಜ್ಯದ 28 ಕ್ಷೇತ್ರಗಳ ಪೈಕಿ ಕಾಂಗ್ರೆಸ್‌ಗೆ ಕೇವಲ 9 ಸ್ಥಾನಗಳು ಬಂದು ಉಳಿದವು ಎನ್‌ಡಿಎ ಪಾಲಾಯಿತು. (2ನೇ ಪುಟಕ್ಕೆ)

## ಜೂ.12ರಂದು ನಾಯ್ಡು ಪ್ರಮಾಣ ವಚನ



ಅಮರಾವತಿ, ಜೂ. 7 – ಟಿ.ಡಿ.ಪಿ. ಅಧ್ಯಕ್ಷ ಎನ್. ಚಂದ್ರಬಾಬು ನಾಯ್ಡು ಅವರು ಇದೇ ದಿನಾಂಕ 12ರಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅಂದು ಬೆಳಿಗ್ಗೆ 11.27ರ ಸಮಯದಲ್ಲಿ ಕೇಸರಪಳ್ಳಿ ಐ.ಟಿ. ಪಾರ್ಕ್‌ನಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ.

## ಬೆಂಗಳೂರಲ್ಲಿ ರಾಹುಲ್ ಗಾಂಧಿ ಸಭೆ: ಸಂಸದೆ ಡಾ.ಪ್ರಭಾ ಭಾಗಿ



ಬೆಂಗಳೂರು, ಜೂ. 7- ಲೋಕಸಭಾ ಚುನಾವಣೆಯಲ್ಲಿ ವಿಜೇತರಾದ ಸಂಸದರು ಮತ್ತು ಪರಾಜಿತ ಅಭ್ಯರ್ಥಿಗಳ ಜೊತೆಗೆ ಎಐಸಿಸಿ ಮುಖಂಡರಾದ ರಾಹುಲ್ ಗಾಂಧಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚುನಾವಣಾ ಫಲಿತಾಂಶದ ಪರಾಮರ್ಶೆ ನಡೆಸಿದರು. ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ ಶಿವಕುಮಾರ್, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ಪಕ್ಷದ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಬಡ್ಡಿ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಆರ್.ಬಿ.ಐ.

ಮುಂಬೈ, ಜೂ. 7 - ರಿಸರ್ವ್ ಬ್ಯಾಂಕ್ ಪ್ರಮುಖ ಬಡ್ಡಿ ದರಗಳನ್ನು ಯಥಾಸ್ಥಿತಿಯನ್ನು ಉಳಿಸಿಕೊಂಡಿದೆ. ಹಣದುಬ್ಬರ ನಿಯಂತ್ರಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ರಿಸರ್ವ್ ಬ್ಯಾಂಕ್‌ನ ಆರು ಸದಸ್ಯರ ಹಣಕಾಸು ನೀತಿ ಸಮಿತಿಯು ಬಡ್ಡಿ ದರವನ್ನು ಶೇ.6.50ರ ಹಂತದಲ್ಲಿ ಮುಂದುವರೆಸಲು ನಿರ್ಧರಿಸಿದೆ. ಸತತ ಎಂಟು ಬಾರಿ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಲಾಗಿದೆ.

ಆದರೆ, ಹಣಕಾಸು ನೀತಿ ಸಮಿತಿಯಲ್ಲಿ ಒಡಕಿನ ಅಭಿಪ್ರಾಯ ವ್ಯಕ್ತವಾಗಿದೆ. ಹಣಕಾಸು ನೀತಿ ಸಡಿಲಿಸಬೇಕು ಎಂದು ಒಬ್ಬರು ಅಭಿಪ್ರಾಯ ಪಟ್ಟಿದ್ದರೆ, ಇಬ್ಬರು ಸದಸ್ಯರು ಬಡ್ಡಿ ದರ ಇಳಿಕೆಯ ಪರ ನಿಲುವು ತಳೆದಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 3ನೇ ಬಾರಿ ಅಧಿಕಾರ ವಹಿಸಿಕೊಳ್ಳುವ ಮುನ್ನಾ ದಿನ ಹಣಕಾಸು ನೀತಿಯ ಬಗ್ಗೆ (2ನೇ ಪುಟಕ್ಕೆ)


**District 17 ಹೋಟೆಲ್ ಬಾಡಿಗೆಗಿದೆ**

ದಾವಣಗೆರೆ ನಗರದ ಬೈಪಾಸ್ ರಸ್ತೆಯಲ್ಲಿರುವ District -17 ಹೋಟೆಲ್ ಅನ್ನು ರೆಸ್ಟೋರೆಂಟ್, ಜಿಮ್, ಸ್ಕೂಲ್, ಹಾಸ್ಟೆಲ್, ಟೈಲ್ಸ್/ಪ್ಲೈವುಡ್ ಶಾಪ್‌ಗೆ, ಆಫೀಸ್‌ಗೆ ಬಾಡಿಗೆಗೆ ಕೊಡಲಾಗುವುದು.

97319 99918

**+ Prime Site for Sale +**

Premium location east facing 3500 sft. site on Stadium Road near City Central Hospital @ Davanagere available for Sale

95136 99252

- Brokers Excuse -




SPARSH HOSPITAL — SPARSH

**ದಾವಣಗೆರೆಯಲ್ಲಿ ಸ್ಪರ್ಶ್ ಫೌಂಡೇಶನ್ನಿಂದ ನಿವೃತ್ತ ಶಿಕ್ಷಕರಿಗೆ**

**ಉಚಿತ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆ**

ಬೆಂಗಳೂರಿನ ಸ್ಪರ್ಶ್ ಗ್ರೂಪ್ ಆಫ್ ಹಾಸ್ಪಿಟಲ್‌ನ ದತ್ತಿ ವಿಭಾಗವಾದ ಸ್ಪರ್ಶ್ ಫೌಂಡೇಶನ್, ದಾವಣಗೆರೆಯಲ್ಲಿ ನಿವೃತ್ತ ಶಿಕ್ಷಕರಿಗೆ ಉಚಿತ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆಯನ್ನು ಮಾಡಲಿದೆ. ಸ್ಪರ್ಶ್ ಅವರ ಈ ಉಪಕ್ರಮವು ಸ್ಪರ್ಶ್ ಫೌಂಡೇಶನ್‌ನ 'ಸ್ಪರ್ಶ್ ಗುರು ನಮನ' ಕಾರ್ಯಕ್ರಮದ ಒಂದು ಭಾಗವಾಗಿದೆ. ಇದು ಗ್ರಾಮೀಣ ಹಿನ್ನೆಲೆಯ ನಿವೃತ್ತ ಶಕ್ಷಕರಿಗೆ ಜೀವನದ ದಿಕ್ಕನ್ನೇ ಬದಲಾಯಿಸಬಲ್ಲ ಕೀಲು ಬದಲಿ ಶಸ್ತ್ರಚಿಕಿತ್ಸೆಗಳನ್ನು ಉಚಿತ ಒದಗಿಸುವ ಗುರಿಯನ್ನು ಹೊಂದಿರುವ ಯೋಜನೆಯಾಗಿದೆ.

ಶಸ್ತ್ರಚಿಕಿತ್ಸಕರು, ಆಪರೇಷನ್ ಥಿಯೇಟರ್ ಸಿಬ್ಬಂದಿ, ಶುಶ್ರೂಷಾ ಸಿಬ್ಬಂದಿ, ಅರೆವೈದ್ಯಕೀಯ ಸಿಬ್ಬಂದಿ, ಫಿಸಿಯೋಥೆರಪಿಸ್ಟ್‌ಗಳು, ಔದ್ಯೋಗಿಕ ಚಿಕಿತ್ಸಕರು ಮತ್ತು ಆಹಾರ ತಜ್ಞರನ್ನು ಒಳಗೊಂಡ ಸಮರ್ಪಿತ ತಂಡವು ಯಾವುದೇ ಶುಲ್ಕವಿಲ್ಲದೆ ಸೇವೆಗಳನ್ನು ನೀಡಲಿದೆ. ಶಿಬಿರಕ್ಕೆ ಮುಂಚಿತವಾಗಿ ನೋಂದಣಿ ಮಾಡುವುದು ಕಡ್ಡಾಯ.

**ದಾವಣಗೆರೆ**

ದಿನಾಂಕ: 11ನೇ ಜೂನ್ 2024 । ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

ಸಂಪರ್ಕ ವ್ಯಕ್ತಿ: ಶ್ರೀ ನಾಗರಾಜ್ – ಸಂಪರ್ಕ ಸಂಖ್ಯೆ: +91 89042 43944

ನೋಂದಣಿಗಾಗಿ ಕರೆ ಮಾಡಿ: 99800 33277 । 96869 29090

ಸ್ಥಳ: ಎಸ್ ಎಸ್ ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ ಸಿ ಸಿ, ಎ ಬ್ಲಾಕ್, ಮೋತಿ ವೀರಪ್ಪ ಕಾಲೇಜು ರಸ್ತೆ, ದಾವಣಗೆರೆ–577 002

SPARSH FOUNDATION — THE TOUCH OF LIFE

#146, ಇನ್‌ಫೆಂಟ್ರಿ ರಸ್ತೆ, ಕಮಿಷನರ್ ಕಚೇರಿ ಎದುರು, ಬೆಂಗಳೂರು – 560 001

ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ: +91 97313 16370 । ಇಮೇಲ್ ಮಾಡಿ: foundation@sparshhospital.com




| NAME | Expected NEET-2024 | NEET -2023 Marks | Improvement Marks |
| --- | --- | --- | --- |
| RAHUL B. N. | 660 | 287 | 373 |
| CHINMAY N. | 655 | 323 | 332 |
| ADARSH P. B. | 695 | 364 | 331 |
| MISBA TARANNUM | 637 | 307 | 330 |
| SHASHANK K. B. | 655 | 354 | 301 |
| GAGAN H. P. | 621 | 336 | 285 |
| ESHWAR NAIK | 605 | 320 | 285 |
| POORVIKA M. A. | 612 | 334 | 278 |
| SINCHANA M. D. | 607 | 329 | 278 |
| MANJUNATH R. | 625 | 351 | 274 |
| VARSHA P. | 600 | 339 | 261 |

| NEET Marks | Concession |
| --- | --- |
| 450 Above | 77% |
| 400 Above | 63% |
| 350 Above | 33% |

Concession For Above Marks Scored in NEET - 2024

Admissions are in Progress

Limited seats & Limited Hostel Facility

SIR M V GROUP OF INSTITUTIONS

DAVANGERE 9243312223, 8861044569, 8722141400 | SHIMOGA 9035141142, 9606554836, 9606558762 | BALLARI 8197764018, 9945377965

# ಗುರುಗಳ ಹೃದಯ ಗೆದ್ದಿರುವ ಶಿಷ್ಯರ ಬದುಕು ಸಾರ್ಥಕ

## ಯಲವಟ್ಟಿ : ಶತಾಯುಷಿ ಮುರುಗೆಪ್ಪಗೌಡ್ರ ಸನ್ಮಾನ ಕಾರ್ಯಕ್ರಮದಲ್ಲಿ ಯೋಗಾನಂದ ಶ್ರೀಗಳು



ಮಲೇಬೆನ್ನೂರು, ಜೂ.7- ತಮ್ಮ ನಿಜವಾದ ಭಕ್ತಿ-ಭಾವಗಳಿಂದ ಗುರುಗಳ ಹೃದಯ ಗೆದ್ದಿರುವ ಶಿಷ್ಯರು ಸಾರ್ಥಕ ಬದುಕು ಕಂಡುಕೊಂಡಿದ್ದಾರೆ. ಅಂತಹ ಶಿಷ್ಯರ ಪೈಕಿ ಮುರುಗೆಪ್ಪಗೌಡ್ರು ಕೂಡಾ ಒಬ್ಬರು ಎಂದು ಶ್ರೀ ಯೋಗಾನಂದ ಸ್ವಾಮೀಜಿ ಹೇಳಿದರು.

ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಅಮವಾಸ್ಯೆ ಸತ್ಸಂಗ ಕಾರ್ಯಕ್ರಮದಲ್ಲಿ ಗ್ರಾಮದ ಶತಾಯುಷಿ ಗೌಡ್ರ ಮುರುಗೆಪ್ಪಗೌಡ ಅವರನ್ನು ಗೌರವಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ಯಲವಟ್ಟಿ ಮಠ ಪ್ರಾರಂಭವಾದ ಕಾಲದಿಂದಲೂ ಮುರುಗೆಪ್ಪಗೌಡ್ರು ಮಠದೊಂದಿಗೆ ಸಂಪರ್ಕ ಬೆಳಸಿಕೊಂಡು ಹಿಂದಿನ ಇಬ್ಬರು ಶ್ರೀಗಳ ನೆಚ್ಚಿನ ಶಿಷ್ಯರಾಗಿದ್ದರು. ನಾವು ಈ ಮಠಕ್ಕೆ ಬಂದ ನಂತರವೂ ಅದೇ ಒಡನಾಟ ಇಟ್ಟುಕೊಂಡಿದ್ದಾರೆ. ಹಾಗಾಗಿ ಅವರು ತಮ್ಮ ಸಾರ್ಥಕ ಬದುಕಿನ 100 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ, ನಮ್ಮೊಂದಿಗೆ ಇನ್ನೂ ಗಟ್ಟಿಮುಟ್ಟಾಗಿದ್ದಾರೆಂದು ಯೋಗಾನಂದ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸ ಮಾ ಜ ಮು ಖಿ ಯಾ ಗಿ ರು ವ ಮುರುಗೆಪ್ಪ ಗೌಡ್ರು, ಇನ್ನೂ ಹಲವು ವರ್ಷ ನಮಗೆ ಮಾರ್ಗದರ್ಶಕರಾಗಿರಲಿ ಎಂದು ಸ್ವಾಮೀಜಿ ಆಶಯ ವ್ಯಕ್ತಪಡಿಸಿ, ಶುಭ ಹಾರೈಸಿದರು.

ಗ್ರಾಮದ ಹಿರಿಯ ಮುಖಂಡ ಡಿ.ಯೋಮಕೇಶ್ವರಪ್ಪ ಮಾತನಾಡಿ, ಮುರುಗೆಪ್ಪಗೌಡ್ರು 100 ವರ್ಷ ಪೂರೈಸಿದ್ದರೂ ಆರೋಗ್ಯದಿಂದ್ದಾರೆ. ನಮ್ಮೂರಿನಲ್ಲಿ ಇಷ್ಟು ವಯಸ್ಸು ಬಾಳಿದವರನ್ನು ನಮ್ಮ ಯುವ ಜನಾಂಗ ನೋಡಿ ಕಲಿಯಲಿ ಎಂದರು.

ಪ್ರವಚನಕಾರ ಸಿರಿಗೆರೆ ಸಿದ್ದೇಶ್ ಮಾತನಾಡಿ, ಮನುಷ್ಯ ಬದುಕಿನ ಶಾಂತಿ, ಸಮಾಧಾನ ಮತ್ತು ಎಲ್ಲರನ್ನೂ ಪ್ರೀತಿಸುವ, ಗೌರವಿಸುವ ಗುಣ ಬೆಳೆಸಿಕೊಂಡಲ್ಲಿ ಆಯುರಾರೋಗ್ಯ ಭಾಗ್ಯ ಕಾಣಲು ಸಾಧ್ಯ ಎಂದರು.

ಕುಣೆಬೆಳಕೆರೆಯ ಮಹಾದೇವಪ್ಪ ಮಾತನಾಡಿದರು.

ಗ್ರಾಮದ ನಿವೃತ್ತ ಶಿಕ್ಷಕ ಜಿ.ಬಸಪ್ಪ, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಸಿರಿಗೆರೆಯ ಐಗೂರು ಕರಿಬಸಪ್ಪ, ಮಾಗೋಡ್ ರೇವಣಸಿದ್ದಪ್ಪ, ಮಾಗೋಡ್ ಮಂಜಪ್ಪ, ಹನುಮಗೌಡ್ರು, ಕುಂಬಳೂರಿನ ಕೆ.ಕುಬೇರಪ್ಪ, ಭೂಪಾಲಪ್ಪ, ಸದಾಶಿವ, ಯಲವಟ್ಟಿಯ ಹೊಸಮನಿ ಮಲ್ಲಪ್ಪ, ಡಿ.ರಾಜಪ್ಪ, ಬಿ.ಜಿ.ಮಲ್ಲೇಶಪ್ಪ, ಎ.ಜಗದೀಶ್, ಮದಕರಿ, ಹೊರಟ್ಟಿ ಕರಿಬಸಪ್ಪ, ಪತ್ರಕರ್ತರಾದ ಜಿಗಳಿ ಪ್ರಕಾಶ್, ಕೆ.ಎನ್.ಹಳ್ಳಿ ನಾಗೇಂದ್ರಪ್ಪ, ಕುಂಬಳೂರು ಸದಾನಂದ್, ಜಿಗಳಿಯ ಕೆ.ಎಸ್. ಮಾಲತೇಶ್, ಎ.ಕೆ.ಜಯ್ಯಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಈ ವೇಳೆ ಗ್ರಾಮದ ಕರಿಬಸಪ್ಪ ಚೌದ್ರಿ ಅವರ ಆತ್ಮಕ್ಕೆ ಚಿರಶಾಂತಿ ಕೋರಿ ಮೌನಾಚರಣೆ ಮಾಡಲಾಯಿತು.

ಗ್ರಾಮದ ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.

# ಮಾನನಷ್ಟ ಪ್ರಕರಣ : ರಾಹುಲ್‌ಗೆ ಜಾಮೀನು



ಬೆಂಗಳೂರು, ಜೂ. 7 - ಬಿಜೆಪಿ ಹೂಡಿರುವ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರಿಗೆ ನಗರದ 42ನೇ ಎಸಿಎಂಎಂ ನ್ಯಾಯಾಲಯ ಇಂದು ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಮಂಜೂರು ನಂತರ ಪ್ರಕರಣದ ಮುಂದಿನ ವಿಚಾರಣೆಯನ್ನು ಜೂನ್ 30ಕ್ಕೆ ಮುಂದೂಡಿತು.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಸೋಲನುಭವಿಸಿದ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್ ಅವರು ರಾಹುಲ್ ಗಾಂಧಿಗೆ 75 ಲಕ್ಷ ರೂ. ಮೌಲ್ಯದ ಶ್ಯೂರಿಟಿ ಒದಗಿಸಿದರು. ಕಾಗದಪತ್ರಗಳಿಗೆ ಸಹಿ ನಂತರ ರಾಹುಲ್ ಗಾಂಧಿ ನ್ಯಾಯಾಲಯದಿಂದ ಹೊರನಡೆದರು.

ಕಳೆದ ಬಾರಿ ವಿಚಾರಣೆ ವೇಳೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ನ್ಯಾಯಾಧೀಶರ ಮುಂದೆ ಹಾಜರಾಗಿ ಷರತ್ತುಬದ್ಧ ಜಾಮೀನು ಪಡೆದಿದ್ದರು. ಪ್ರಕರಣದ ನಾಲ್ಕನೇ ಆರೋಪಿ ರಾಹುಲ್ ಗಾಂಧಿ ಗೈರಾಗಿದ್ದಕ್ಕೆ ಗರಂ ಆದ ನ್ಯಾಯಾಧೀಶರು, ಮುಂದಿನ ಬಾರಿ ರಾಹುಲ್ ಖುದ್ದು ಹಾಜರಿರಬೇಕು ಎಂದು ನಿರ್ದೇಶನ ನೀಡಿದ್ದರು.

ಚುನಾವಣೆ ಸಂದರ್ಭದಲ್ಲಿ ಆರೋಪ ಮಾಡಿದ್ದ ಕಾಂಗ್ರೆಸ್, 2019ರಿಂದ 2023ರವರೆಗೆ ಬಿಜೆಪಿ ಭ್ರಷ್ಟ ಆಡಳಿತ ನಡೆಸಿತ್ತು, ಮುಖ್ಯಮಂತ್ರಿ ಹುದ್ದೆಗೆ 2,500 ಕೋಟಿ ರೂ., ಸಚಿವ ಹುದ್ದೆಗಳಿಗೆ 500 ಕೋಟಿ ರೂ.ಗಳನ್ನು ಪಕ್ಷದ ಹೈಕಮಾಂಡ್‌ಗೆ ನೀಡಿ ಪಡೆಯಲಾಗಿದೆ ಎಂದು ಆರೋಪಿಸಿತ್ತು.

ಕೋವಿಡ್ ಸಮಯದಲ್ಲಿ ಕಿಟ್ ಪೂರೈಕೆ ಗುತ್ತಿಗೆಯಲ್ಲಿ 75% ಡೀಲ್, ಪಿಡಬ್ಲ್ಯೂಡಿ ಗುತ್ತಿಗೆಯಲ್ಲಿ 40% ಡೀಲ್, ಮಠಗಳ ಅನುದಾನದಲ್ಲಿ 30% ಡೀಲ್, ಶಾಲಾ ಮಕ್ಕಳಿಗೆ ನೀಡುವ ಮೊಟ್ಟೆ ಪೂರೈಕೆ ಗುತ್ತಿಗೆಯಲ್ಲಿ 30% ಡೀಲ್, ರಸ್ತೆ ಕಾಮಗಾರಿಯಲ್ಲಿ 40% ಡೀಲ್ ನಡೆದಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು.

ಬಿಜೆಪಿ ಕಾರ್ಯದರ್ಶಿ ಕೇಶವ ಪ್ರಸಾದ್, 2023ರ ಮೇ 8ರಂದು 42ನೇ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿ, ಕಾಂಗ್ರೆಸ್ ನಾಯಕರು ಸುಳ್ಳು ಆರೋಪ ಮಾಡುವ ಮೂಲಕ ಬಿಜೆಪಿಗೆ ದಕ್ಕೆ ಉಂಟು ಮಾಡಿದ್ದಾರೆ. ಸುಳ್ಳು ಜಾಹೀರಾತು ನೀಡಿದ್ದರಿಂದ ಪಕ್ಷಕ್ಕೆ ಚುನಾವಣೆಯಲ್ಲಿ ಹಾನಿಯಾಗಿದೆ. ಆರೋಪಗಳಿಗೆ ದಾಖಲೆ ನೀಡಬೇಕು ಎಂದು ವಾದ ಮಾಡಿದ್ದರು.

# ಲೋಕಸಭಾ ಚುನಾವಣೆಯಲ್ಲಿ ಎಲ್ಲಿ ಲೋಪವಾಗಿದೆ?

**ನಿರೀಕ್ಷೆಯಷ್ಟು ಸ್ಥಾನ ದೊರೆಯದೇ ಇರುವುದಕ್ಕೆ ರಾಜ್ಯ ನಾಯಕರಿಗೆ ರಾಹುಲ್ ಪ್ರಶ್ನೆ**

ಬೆಂಗಳೂರು, ಜೂ. 7 - ಸಚಿವರು ಹಾಗೂ ಪಕ್ಷದ ಪ್ರಭಾವೀ ಕುಟುಂಬದವರಿಗೆ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನೀಡಿದ್ದರೂ ಹೆಚ್ಚು ಸ್ಥಾನ ಗಳಿಸಲು ಏಕೆ ಸಾಧ್ಯವಾಗಿಲ್ಲ ಎಂದು ಕಾಂಗ್ರೆಸ್‌ನ ಅಧಿನಾಯಕ ರಾಹುಲ್ ಗಾಂಧಿ ರಾಜ್ಯ ನಾಯಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಹೂಡಿದ್ದ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದ ನಂತರ ಪಕ್ಷದ ಕಚೇರಿಯಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಹಾಗೂ ಸೋತವರ ಸಭೆಯಲ್ಲಿ ಮಾತನಾಡಿದ ಅವರು, ಸೋತ ಕ್ಷೇತ್ರಗಳ ಬಗ್ಗೆ ವರದಿ ನೀಡಿ ಎಂದು ಸೂಚಿಸಿದ್ದಾರೆ.

ಲೋಕಸಭಾ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ನಾವು ಹಸ್ತಕ್ಷೇಪ ಮಾಡಲಿಲ್ಲ, ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದವರಿಗೇ ಟಿಕೆಟ್ ನೀಡಿದ್ದೇವೆ, ಅದರಲ್ಲೂ ಅವರ ಕುಟುಂಬದ ಸದಸ್ಯರಿಗೇ ಕೊಟ್ಟಿದ್ದೇವೆ. ಆದರೂ ಕರ್ನಾಟಕದಲ್ಲಿ ಏಕೆ ಹೆಚ್ಚು ಸ್ಥಾನ ಗಳಿಸಲು ಸಾಧ್ಯವಾಗಲಿಲ್ಲ, ಅದರಲ್ಲೂ ನಮ್ಮ ಪಕ್ಷವೇ ಅಧಿಕಾರದಲ್ಲಿದೆ, ಹೀಗಿದ್ದೂ ಎಲ್ಲಿ ಲೋಪ ಉಂಟಾಯಿತು ಎಂದು ಪ್ರಶ್ನಿಸಿದ್ದಾರೆ.

ಟಿಕೆಟ್ ಪಡೆದ ಕೆಲವು ಸಚಿವರು ತಮ್ಮ ಮಕ್ಕಳನ್ನೂ ಗೆಲ್ಲಿಸಿಕೊಳ್ಳಲಾಗಲಿಲ್ಲ. ಹಲವು ಸಚಿವರು ತಮ್ಮ ತಮ್ಮ ಉಸ್ತುವಾರಿ ಕ್ಷೇತ್ರಗಳನ್ನೂ ಗೆಲ್ಲಿಸಿಕೊಳ್ಳಲು ಸಾಧ್ಯವಾಗಲಿಲ್ಲ ಏತಕ್ಕೆ? ಸಚಿವರು ನಿರೀಕ್ಷಿತ ಮಟ್ಟಲ್ಲಿ ಶ್ರಮ ಹಾಕಿ ಕೆಲಸ ಮಾಡಲಿಲ್ಲವೇ? ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಲೋಕಸಭಾ ಚುನಾವಣೆಯ ಸೋಲು-ಗೆಲುವಿನ ಕುರಿತು ಶನಿವಾರ ಸಭೆ ಕರೆದು ಪರಾಮರ್ಶೆ ಮಾಡಲಾಗುವುದು. ಸೋತಿರುವ ಕ್ಷೇತ್ರಗಳಲ್ಲಿ ಹಿನ್ನಡೆಗೆ ಕಾರಣವಾಗಿರುವ ಅಂಶಗಳ ಕುರಿತು ಮಾಹಿತಿ ಸಂಗ್ರಹಿಸಲಾಗುವುದು ಎಂದರು.

# ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲುಗೈ

**(1ನೇ ಪುಟದಿಂದ)** ಕಳೆದ ಚುನಾವಣೆಯಲ್ಲಿ ಒಂದು ಸ್ಥಾನ ಗಳಿಸಿದ್ದ ಕಾಂಗ್ರೆಸ್ ಈ ಬಾರಿ ಮೂರರಲ್ಲಿ ಜಯ ಗಳಿಸಿದೆ.

ಜೆಡಿಎಸ್ ತನ್ನ ಎರಡು ಸ್ಥಾನ ಉಳಿಸಿಕೊಂಡರೆ, ಬಿಜೆಪಿ ತನ್ನ ಪಾಲಿನ ಎರಡು ಕ್ಷೇತ್ರವನ್ನು ಕಳೆದುಕೊಂಡಿದೆ.

ಈಶಾನ್ಯ ಪದವೀಧರ ಕ್ಷೇತ್ರದಿಂದ ಡಾ.ಚಂದ್ರಶೇಖರ್ ಬಸವರಾಜ ಪಾಟೀಲ್, ಬೆಂಗಳೂರು ಪದವೀಧರ ಕ್ಷೇತ್ರದಿಂದ ನ.ರಾಮೋಜಿ ಗೌಡ, ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ಡಿ.ಟಿ. ಶ್ರೀನಿವಾಸ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಜಯ ಗಳಿಸಿದ್ದಾರೆ.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಕೆ.ವಿವೇಕಾನಂದ, ನೈಋತ್ಯ ಶಿಕ್ಷಕರ ಕ್ಷೇತ್ರದಿಂದ ಎಸ್.ಎಲ್.ಬೋಜೇ ಗೌಡ, ಜೆಡಿಎಸ್ ಅಭ್ಯರ್ಥಿಗಳಾಗಿ ಪರಿಷತ್ ಪ್ರವೇಶಿಸಿದ್ದಾರೆ.

ಇನ್ನು ನೈಋತ್ಯ ಪದವೀಧರ ಕ್ಷೇತ್ರದಿಂದ ಬಿಜೆಪಿಯ ಡಾ.ಧನಂಜಯ ಸರ್ಜಿ ಪರಿಷತ್ತಿಗೆ ಆಯ್ಕೆಗೊಂಡಿದ್ದಾರೆ.



ದಾವಣಗೆರೆ, ಜೂ.6- ಜೀವನ್ ಭೀಮ ನಗರದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಬೆನಕಮ್ಮ ಮತ್ತು ನೇತ್ರಾವತಿ ಕುಟುಂಬದವರು ಸಸಿ ನೆಟ್ಟರು.

# ಸರ್ಕಾರ ಸರ್ವಮತದೊಂದಿಗೆ ದೇಶ

**(1ನೇ ಪುಟದಿಂದ)** ಹೊಂದಿದ ಭಾರತ, ಆಶಯದ ಭಾರತದ ಪರವಾಗಿದೆ ಎಂದು ಹೇಳಿದ ಮೋದಿ, ಎನ್.ಡಿ.ಎ. ಮೈತ್ರಿಕೂಟದ ಪ್ರಮುಖ ರೂವಾರಿಗಳಾದ ಅಟಲ್ ಬಿಹಾರಿ ವಾಜಪೇಯಿ, ಜಾರ್ಜ್ ಫರ್ನಾಂಡೀಸ್, ಬಾಳ್ ಠಾಕ್ರೆ, ಶರದ್ ಯಾದವ್ ಹಾಗೂ ಪ್ರಕಾಶ್ ಸಿಂಗ್ ಬಾದಲ್ ಅವರನ್ನು ಸ್ಮರಿಸಿದರು. ಎನ್.ಡಿ.ಎ.ದ ನಾಯಕರಿಗೆ ಗೆಲುವಿನ ಅಭಿನಂದನೆ ಸಲ್ಲಿಸಿದ ಅವರು, ಈ ಗೆಲುವಿಗಾಗಿ ಶ್ರಮಿಸಿದ ಲಕ್ಷಾಂತರ ಕಾರ್ಯಕರ್ತರಿಗೆ ವಂದಿಸುವುದಾಗಿ ಹೇಳಿದರು.

ನಾವೆಂದೂ ಸೋತಿಲ್ಲ. ಜೂನ್ 4ರಂದು ನಮ್ಮ ವರ್ತನೆ ನೋಡಿದಾಗ ನಾವು ಗೆಲುವನ್ನು ಅರಗಿಸಿಕೊಳ್ಳುವುದನ್ನು ತಿಳಿದಿದ್ದೇವೆ ಎಂಬುದು ಗೊತ್ತಾಗುತ್ತದೆ ಎಂದು ಹೇಳಿದರು.

ಕಳೆದ ಹತ್ತು ವರ್ಷಗಳಲ್ಲಿ ನಾನು ಗುಣಮಟ್ಟದ ಚರ್ಚೆಗಳಿಂದ ವಂಚಿತನಾಗಿದ್ದೇನೆ. ಈ ಬಾರಿ ಗುಣಮಟ್ಟದ ಚರ್ಚೆಯಾಗಲಿದೆ ಎಂಬ ಆಶಾಭಾವನೆ ಇದೆ ಎಂದೂ ಮೋದಿ ತಿಳಿಸಿದರು.

ಪ್ರತಿಪಕ್ಷಗಳು ರಾಷ್ಟ್ರ ಹಿತದೊಂದಿಗೆ ಕಾರ್ಯ ನಿರ್ವಹಿಸಲಿವೆ ಎಂದು ಆಶಿಸುತ್ತೇನೆ. ಅವರು ಪ್ರತಿಪಕ್ಷದ ಸ್ಥಾನದಲ್ಲಿರಬಹುದು, ಆದರೆ, ದೇಶಕ್ಕೆ ವಿರುದ್ಧವಲ್ಲ. ಅವರು ದೇಶ ಹಿತದ ಭಾವನೆಯೊಂದಿಗೆ ಸಂಸತ್ತಿಗೆ ಬರಲಿ ಎಂದು ಆಶಿಸುತ್ತೇನೆ ಎಂದು ಪ್ರಧಾನಿ ಹೇಳಿದ್ದಾರೆ.

ಚುನಾವಣೆಯಲ್ಲಿ ದೊರೆತ ಈ ಗೆಲುವಿಗೆ ಸೋಲಿನ ಕರಿಛಾಯೆ ಹರಡುವ ಪ್ರಯತ್ನ ನಡೆದಿತ್ತು. ಆದರೆ, ಈ ಎಲ್ಲ ಪ್ರಯತ್ನಗಳು ನಿರರ್ಥಕ. ಇಂತಹ ಪ್ರಯತ್ನಗಳು ಎಳೆಯದರಲ್ಲೇ ಅವಸಾನವಾಗಲಿವೆ ಎಂದೂ ಮೋದಿ ಹೇಳಿದರು.

ದೇಶವೇ ಮೊದಲು ಎಂಬ ಭಾವನೆಯೊಂದಿಗೆ ಎನ್.ಡಿ.ಎ. ಮೈತ್ರಿಕೂಟ ರಚನೆಯಾಗಿದೆ. ಮೈತ್ರಿಕೂಟ ಈಗ ನಾಲ್ಕನೇ ಬಾರಿ ಸರ್ಕಾರ ರಚಿಸುವ ಹಾದಿಯಲ್ಲಿದೆ. ನಾವು ಅಧಿಕಾರಕ್ಕಾಗಿ ಜೊತೆಯಾಗಿಲ್ಲ, ದೇಶ ಮೊದಲು ಎಂಬ ಬದ್ಧತೆಗಾಗಿ ಜೊತೆಯಾಗಿದ್ದೇವೆ ಎಂದರು.

ಮತ್ತೊಂದೆಡೆ ಐ.ಎನ್.ಡಿ.ಐ. ಮೈತ್ರಿಕೂಟದ ಪಕ್ಷಗಳು ನಾವು ಲೋಕಸಭಾ ಚುನಾವಣೆಗಾಗಿ ಮಾತ್ರ ಜೊತೆಯಾಗಿರುವುದು ಎಂದು ಹೇಳುತ್ತಿವೆ. ಇದು ಆ ಪಕ್ಷಗಳ ಸ್ವಭಾವ ಹಾಗೂ ಅಧಿಕಾರ ದಾಹ ತೋರುತ್ತದೆ ಎಂದೂ ಮೋದಿ ಹೇಳದರು.

ಸಭೆಯಲ್ಲಿ ಟಿ.ಡಿ.ಪಿ.ಯ ಎನ್. ಚಂದ್ರಬಾಬು ನಾಯ್ಡು, ಜೆ.ಡಿ.ಯು.ನ ನಿತೀಶ್ ಕುಮಾರ್, ಶಿವಸೇನೆಯ ಏಕನಾಥ ಶಿಂದೆ, ಜೆ.ಡಿ.ಎಸ್.ನ ಹೆಚ್.ಡಿ. ಕುಮಾರಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

# ಸಗಟು ಠೇವಣಿ ಮಿತಿ 3 ಕೋಟಿ ರೂ.ಗಳಿಗೆ ಹೆಚ್ಚಳ

**(1ನೇ ಪುಟದಿಂದ)** ಬ್ಯಾಂಕುಗಳ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ಮೃದುತ್ವ ಒದಗಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಶೀಘ್ರದಲ್ಲೇ ಈ ಬಗ್ಗೆ ಮಾರ್ಗಸೂಚಿ ಪ್ರಕಟಿಸಲಾಗುವುದು ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ್ ದಾಸ್ ತಿಳಿಸಿದ್ದಾರೆ.

# ಯಥಾಸ್ಥಿತಿ ಕಾಯ್ದುಕೊಂಡ ಆರ್.ಬಿ.ಐ.

**(1ನೇ ಪುಟದಿಂದ)** ನಿರ್ಧರಿಸಲಾಗಿದೆ. ನೂತನ ಸರ್ಕಾರ ವೇಗದ ಬೆಳವಣಿಗೆಗೆ ಆದ್ಯತೆ ನೀಡಲು ಬಯಸುತ್ತಿದೆ.

ಏಷಿಯಾದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಿರುವ ಭಾರತ, ಹಿಂದಿನ ವರ್ಷಕ್ಕಿಂತ ವೇಗದ ಬೆಳವಣಿಗೆ ಕಾಣಲಿದೆ. ಕಳೆದ ವರ್ಷ ಶೇ.7ರ ಬೆಳವಣಿಗೆಯಾಗಿದ್ದರೆ, ಈ ವರ್ಷ ಶೇ.7.2ರ ಬೆಳವಣಿಗೆಯಾಗಲಿದೆ. ಹಣದುಬ್ಬರ ಶೇ.4.5ರ ಹಂತದಲ್ಲಿ ಇರಲಿದೆ ಎಂದು ರಿಸರ್ವ್ ಬ್ಯಾಂಕ್ ಅಂದಾಜಿಸಿದೆ. ಇದುವರೆಗೂ ಬೆಳವಣಿಗೆಗೆ ಧಕ್ಕೆಯಾಗದ ರೀತಿಯಲ್ಲಿ ಬಡ್ಡಿ ದರ ನಿರ್ವಹಿಸಲಾಗಿದೆ. ಆಹಾರ ಹಣದುಬ್ಬರ ಸೇರಿದಂತೆ ಹಲವು ವಿಷಯಗಳ ಕಡೆ ಗಮನ ಹರಿಸಬೇಕಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ್ ದಾಸ್ ಹೇಳಿದ್ದಾರೆ. ರಿಸರ್ವ್ ಬ್ಯಾಂಕ್ ಹಣದುಬ್ಬರ ದರ ಶೇ.4ರ ಹಂತಕ್ಕೆ ತಲುಪಲಿ ಎಂಬ ಅಪೇಕ್ಷೆ ಹೊಂದಿದೆ.

# ನಾಳೆ ಸಂಜೆ ಮೋದಿ ಪ್ರಮಾಣ ವಚನ

**(1ನೇ ಪುಟದಿಂದ)** ಸಮಾರಂಭದಲ್ಲಿ ಪ್ರಧಾನ ಮಂತ್ರಿ ಹಾಗೂ ಕೇಂದ್ರ ಸಚಿವರಿಗೆ ಪ್ರಮಾಣ ವಚನ ಬೋಧಿಸಲಾಗುವುದು.

ಶುಕ್ರವಾರ ಸಂಜೆ ರಾಷ್ಟ್ರಪತಿ ಭವನಕ್ಕೆ ತೆರಳಿದ ಪ್ರಧಾನಿಗೆ ಮುರ್ಮು ಅವರು ನೇಮಕದ ಪತ್ರವನ್ನು ನೀಡಿದರು.

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಟಿ.ಡಿ.ಪಿ., ಜೆಡಿಯು, ಶಿವಸೇನೆ ಮತ್ತಿತರೆ ಮಿತ್ರ ಪಕ್ಷಗಳಿಗೆ ಸೇರಿದವರೂ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಿತ್ರ ಪಕ್ಷಗಳ ಕನಿಷ್ಠ ಒಬ್ಬರಿಗೆ ಸಚಿವ ಸ್ಥಾನ ನೀಡಲಾಗುವುದು. ನಂತರದಲ್ಲಿ ಸಂಪುಟ ವಿಸ್ತರಣೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.



# ನೈಋತ್ಯ ಚುನಾವಣೆ ಎನ್‌ಡಿಎ ಅಭ್ಯರ್ಥಿ ಸರ್ಜಿ, ಭೋಜೇಗೌಡ ಗೆಲುವು

**ಹೊನ್ನಾಳಿಯಲ್ಲಿ ಬಿಜೆಪಿ ಸಂಭ್ರಮಾಚರಣೆ**

ಹೊನ್ನಾಳಿ, ಜೂ.7- ನೈಋತ್ಯ ಪದವೀಧರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿ ಡಾ. ಧನಂಜಯ ಸರ್ಜಿ 35,434 ಮತಗಳನ್ನು ಪಡೆದು ಆಯ್ಕೆಯಾಗಿದ್ದು, ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಮೈತ್ರಿ ಅಭ್ಯರ್ಥಿ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡರು 9829 ಮತಗಳನ್ನು ಪಡೆದು ಆಯ್ಕೆಯಾಗಿರುವುದಾಗಿ ಹೊನ್ನಾಳಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ.ಸುರೇಶ್ ಹೇಳಿದರು.

ಅವರು ಹೊನ್ನಾಳಿ ತಾಲ್ಲೂಕು ಬಿಜೆಪಿ ಘಟಕವು ನೈಋತ್ಯ ಕ್ಷೇತ್ರದಿಂದ ಮೈತ್ರಿ ಅಭ್ಯರ್ಥಿಗಳು ಜಯ ಗಳಿಸಿದ ಹಿನ್ನೆಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಜಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಚುನಾವಣಾ ಪೂರ್ವದ 25 ದಿನಗಳು ಇಬ್ಬರು ಅಭ್ಯರ್ಥಿಗಳ ಗೆಲುವಿಗೆ ಕಾರ್ಯಕರ್ತರೊಂದಿಗೆ ತಂಡ ರಚಿಸಿ ಕಾರ್ಯನಿರ್ವಹಿಸಿದ್ದರ ಬಗ್ಗೆ ವಿವರಿಸಿದರು.

ನೈಋತ್ಯ ಶಿಕ್ಷಕರ ಕ್ಷೇತ್ರದಿಂದ ಭೋಜೇಗೌಡರು ಎರಡನೇ ಬಾರಿಗೆ ಆಯ್ಕೆಯಾಗಿದ್ದು, ಇದೇ ಮೊದಲ ಬಾರಿಗೆ ಪದವೀಧರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಡಾ. ಧನಂಜಯ ಸರ್ಜಿ ವಿಜೇತರಾಗಿರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಶಾಂತರಾಜ ಪಾಟೀಲ್, ಧರ್ಮಣ್ಣ, ಪೇಟೆ ಪ್ರಶಾಂತ್, ತರಗನಹಳ್ಳಿ ರಮೇಶ್, ಕುಳಗಟ್ಟೆ ರಂಗಣ್ಣ, ಬೇಲಿ ಮಲ್ಲೂರು ಉಮೇಶ್, ಚನ್ನಪ್ಪ ನೆಲವನ್ನಿ ಮಂಜುನಾಥ್, ದೊಡ್ಡೇರಿ ರಾಜಣ್ಣ, ಶಿವಣ್ಣ, ನಾಗರಾಜ್ ಇನ್ನಿತರರಿದ್ದರು.

# ಅಭ್ಯರ್ಥಿಗಳ ಗೆಲುವು ಕಾರ್ಯಕರ್ತರಿಗೆ ಹುರುಪು


**ಹರಪನಹಳ್ಳಿ**



ಹರಪನಹಳ್ಳಿ, ಜೂ.7- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಹಾಗೂ ಈಶಾನ್ಯ ಪದವೀಧರ ಕ್ಷೇತ್ರದ ಅಭ್ಯರ್ಥಿ ಡಾ. ಚಂದ್ರಶೇಖರ ಪಾಟೀಲ್ ಅವರ ಗೆಲುವಿಗೆ ಶ್ರಮಿಸಿದ ಪಕ್ಷದ ಕಾರ್ಯಕರ್ತರನ್ನು ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಶ್ಲಾಘಿಸಿದ್ದಾರೆ.

ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಮತ್ತು ಕಾಂಗ್ರೆಸ್ ಮುಖಂಡರ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಅಲ್ಪ ಮತಗಳ ಹಿನ್ನಡೆಯಾಗಿದ್ದರೂ ಕ್ಷೇತ್ರದಲ್ಲಿ ಕಾಂಗ್ರೆಸ್ ಬಲಾಢ್ಯವಾಗಿದೆ ಎಂದು ತಿಳಿಸಿದ್ದಾರೆ.

# ಮೊದಲ ಹಂತದಲ್ಲೇ ಸಂಪುಟಕ್ಕೆ ಕುಮಾರಸ್ವಾಮಿ ಸೇರ್ಪಡೆ ಸಾಧ್ಯತೆ



ಬೆಂಗಳೂರು, ಜೂ. 7 - ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ಸರ್ಕಾರ ರಚನೆ ಮಾಡುವ ಸಂದರ್ಭದಲ್ಲೇ ಹೆಚ್.ಡಿ.ಕುಮಾರಸ್ವಾಮಿ ಕೇಂದ್ರ ಸಂಪುಟ ಸೇರ್ಪಡೆಗೊಳ್ಳುವ ಸಾಧ್ಯತೆ ಇದೆ.

ಮೋದಿ ಅವರು ಭಾನುವಾರ ಸಂಜೆ ಸರ್ಕಾರ ರಚನೆ ಮಾಡುತ್ತಿದ್ದು ಮೊದಲ ಹಂತದಲ್ಲೇ ತಮ್ಮ ಸಂಪುಟಕ್ಕೆ ಬಿಜೆಪಿ ಹಾಗೂ ಎನ್‌ಡಿಎ ಕೂಟದ ಕೆಲವರನ್ನು ಸೇರ್ಪಡೆ ಮಾಡಿಕೊಳ್ಳಲಿದ್ದಾರೆ.

ಸರ್ಕಾರ ರಚನೆ ಹಾಗೂ ಮಂತ್ರಿ ಸ್ಥಾನಕ್ಕೆ ಸಂಬಂಧಿಸಿದಂತೆ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡ ಹಾಗೂ ಕೇಂದ್ರದ ಮಾಜಿ ಗೃಹ ಸಚಿವ ಅಮಿತ್ ಷಾ ಅವರು, ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿದ್ದಾರೆ.

ಚರ್ಚೆ ಸಂದರ್ಭದಲ್ಲೇ, ಸರ್ಕಾರ ರಚನೆ ವೇಳೆ ನೀವೂ ಇರುತ್ತೀರಿ ಎಂಬ ಇಂಗಿತವನ್ನು ವ್ಯಕ್ತಪಡಿಸಿರುವುದಲ್ಲದೆ, ತಮಗೆ ಜನರ ಸೇವೆ ಸಲ್ಲಿಸುವ ಇಲಾಖೆ ದೊರೆಯಲಿದೆ ಎಂಬ ಮಾಹಿತಿಯೂ ನೀಡಿದ್ದಾರೆ.

ಕಳೆದ 5ರಂದು ನಡ್ಡ ಅವರ ಅಧ್ಯಕ್ಷತೆಯಲ್ಲಿ ನಡೆದ ಎನ್‌ಡಿಎ ಕೂಟದ ಮಿತ್ರ ಪಕ್ಷಗಳ ಸಭೆಯಲ್ಲಿ ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡುವ ತೀರ್ಮಾನ ಕೈಗೊಳ್ಳಲಾಗಿತ್ತು.

ಸಭೆ ನಂತರ ಮೈತ್ರಿಕೂಟದ ಎಲ್ಲಾ ಮುಖಂಡರೊಂದಿಗೆ ನರೇಂದ್ರ ಮೋದಿ, ಅಮಿತ್ ಷಾ, ಜೆ.ಪಿ.ನಡ್ಡ ಹಾಗೂ ಬಿ.ಎಲ್. ಸಂತೋಷ್ ಅವರು ಅನೌಪಚಾರಿಕವಾಗಿ ಚರ್ಚೆ ನಡೆಸಿದ್ದರು.

ಸಭೆ ಮುಗಿಸಿಕೊಂಡು ನಗರಕ್ಕೆ ಹಿಂತಿರುಗಿದ ಕುಮಾರಸ್ವಾಮಿ ಅವರು, ಇಂದು ಬೆಳಗ್ಗೆ ದೆಹಲಿಗೆ ತೆರಳಿ ಸಂಸತ್‌ನ ಸೆಂಟ್ರಲ್ ಹಾಲ್‌ನಲ್ಲಿ ಮೋದಿ ಅವರನ್ನು ಅಧಿಕೃತವಾಗಿ ನಾಯಕರನ್ನಾಗಿ ಮಾಡುವ ಸಭೆಯಲ್ಲಿ ಭಾಗವಹಿಸಿ, ಪಕ್ಷದ ಬೆಂಬಲ ವ್ಯಕ್ತಪಡಿಸಿದರು.

ಭಾನುವಾರ ಕುಮಾರಸ್ವಾಮಿ ಅಧಿಕಾರ ವಹಿಸಿಕೊಳ್ಳುವುದು ಖಚಿತವಾಗುತ್ತಿದ್ದಂತೆ, ಅವರ ತಂದೆ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮತ್ತು ಕುಟುಂಬ ವರ್ಗದವರು ಶನಿವಾರ ಬೆಳಗ್ಗೆ ದೆಹಲಿಯತ್ತ ಪ್ರಯಾಣ ಬೆಳೆಸುತ್ತಿದ್ದಾರೆ.

ಮೋದಿ ಸಂಪುಟದಲ್ಲಿ ಕುಮಾರಸ್ವಾಮಿ ಅವರಿಗೆ ಮೊದಲ 10 ಸ್ಥಾನದೊಳಗೆ ಅವಕಾಶ ದೊರೆಯಲಿದೆ, ಅಲ್ಲದೆ, ಕೃಷಿ, ಜಲಸಂಪನ್ಮೂಲ ಇಲ್ಲವೇ ಗ್ರಾಮೀಣಾಭಿವೃದ್ಧಿ ಇಲಾಖೆಗಳಲ್ಲಿ ಒಂದು ಖಾತೆ ದೊರೆಯುವ ಸಾಧ್ಯತೆ ಇದೆ ಎಂದು ಉನ್ನತ ಮೂಲಗಳು ತಿಳಿಸಿವೆ.



# ಮಲೇಬೆನ್ನೂರಿನಲ್ಲಿ ಇ-ಸ್ಟ್ಯಾಂಪ್ ಸೌಲಭ್ಯ

ಮಲೇಬೆನ್ನೂರು, ಜೂ.7- ಶ್ರೀ ಬೀರೇಶ್ವರ ಕೋ - ಆಪ್ ಕ್ರೆಡಿಟ್ ಸೊಸಾಯಟಿ (ಯಕ್ಸಂಬಾ) ಮಲೇಬೆನ್ನೂರು ಶಾಖೆಯಲ್ಲಿ ಇ - ಸ್ಟ್ಯಾಂಪ್ (ಬಾಂಡ್ ಪೇಪರ್) ಸೇವೆಯನ್ನು ಪ್ರಾರಂಭಿಸಲಾಗಿದೆ. ಪಿ.ಎನ್. ರಂಗಪ್ಪ, ವಕೀಲ ಎನ್.ಪಿ.ತಿಮ್ಮನಗೌಡ, ಎಂ. ಬ್ರಹ್ಮಚಾರಿ, ಹೆಚ್.ವಿ.ರಮೇಶ್, ಎಸ್.ಗಂಗಾಧರಪ್ಪ, ನಾಗರಾಜ, ಬಿ. ಹೆಚ್.ರಾಘವೇಂದ್ರ, ಶಾಖಾ ವ್ಯವಸ್ಥಾಪಕ ಸುನೀಲ್ ಅಥಣಿ ಉಪಸ್ಥಿತರಿದ್ದರು.

# ರಸಗೊಬ್ಬರ ಕೊರತೆಯಾಗದಂತೆ ನೋಡಿಕೊಳ್ಳಿ



**(1ನೇ ಪುಟದಿಂದ)** ನಿಗಮದ ವೇರ್ ಹೌಸ್‌ಗೆ ಭೇಟಿ ನೀಡಿ ಗೊಬ್ಬರದ ದಾಸ್ತಾನನ್ನು ಪರಿಶೀಲಿಸಿ ಕೃಷಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ರೈತರಿಗೆ ಸಮರ್ಪಕವಾಗಿ ಬೀಜ ಮತ್ತು ಗೊಬ್ಬರವನ್ನು ವಿತರಿಸುವಂತೆ ಹಾಗೂ ರೈತರಿಗೆ ಯಾವುದೇ ರೀತಿ ತೊಂದರೆ ಉಂಟಾಗದಂತೆ ಜನಪರವಾಗಿ ಹಾಗೂ ಜನಸ್ನೇಹಿಯಾಗಿ ಕಾರ್ಯನಿರ್ವಹಿಸುವಂತೆ ಕೃಷಿ ಅಧಿಕಾರಿಗಳಿಗೆ ಸೂಚಿಸಿದರು.

## ಹಳೇ ಬಿಸಲೇರಿ ಕೊಟ್ರಪ್ಪ ಕೆ.ಎಸ್. ರುದ್ರೇಶ ನಿಧನ



ದಾವಣಗೆರೆ ತಾಲ್ಲೂಕು ಹಳೇ ಬಿಸಲೇರಿ ಗ್ರಾಮದ ವಾಸಿ

**ಕೊಟ್ರಪ್ಪ ಕೆ.ಎಸ್. ರುದ್ರೇಶ (54)**

ಇವರು ದಿನಾಂಕ 7.6.2024ರ ಶುಕ್ರವಾರ ಮಧ್ಯಾಹ್ನ 3 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.6.2024ರ ಶನಿವಾರ ಮಧ್ಯಾಹ್ನ 12ಕ್ಕೆ ಸ್ವಗ್ರಾಮವಾದ ಹಳೇ ಬಿಸಲೇರಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 99453 89856**

## ವೈಕುಂಠ ಸಮಾರಾಧನೆ



ಆತ್ಮಿಯರೇ

ನನ್ನ ಪತಿ **ಶ್ರೀ ಪಿ.ವಿ. ಲಿಂಗರಾಜು,** ವಕೀಲರು

ಇವರು ದಿನಾಂಕ : 28.05.2024 ಮಂಗಳವಾರದಂದು ದೈವಾಧೀನರಾಗಿರುವರೆಂದು ತಿಳಿಸಲು ವಿಷಾದಿಸುತ್ತೇವೆ.

ಈ ಪ್ರಯುಕ್ತ ಮೃತರ ಆತ್ಮಸದ್ಗತಿಗಾಗಿ **ವೈಕುಂಠ ಸಮಾರಾಧನೆ**ಯನ್ನು ದಿನಾಂಕ 08.06.2024ರ ಶನಿವಾರದಂದು ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಈ ಪ್ರಯುಕ್ತ ತಾವೆಲ್ಲರೂ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಆಪೇಕ್ಷಿಸುವ.

**ದುಃಖತಪ್ತರು : ಪತ್ನಿ : ಶ್ರೀಮತಿ ನಂದಿನಿ ದಿ. ಲಿಂಗರಾಜು ಮಕ್ಕಳು, ಅಣ್ಣ-ತಮ್ಮಂದಿರು ಹಾಗೂ ಕುಟುಂಬಸ್ಥರು.**

**ಕಿರಣ್ : ಪಿ.ವಿ. 83100 71142, ನಾಗರಾಜ್ : 9900758282**

## ಎ.ಹೆಚ್. ಚಂದ್ರಶೇಖರ್ ನಿಧನ



ದಾವಣಗೆರೆಯ ಸಿದ್ದಲಿಂಗಸ್ವಾಮಿ ಕಾಂಪೌಂಡ್ ವಾಸಿ ಅಥಣಿ ಹಿರೇಮಠದ ಶ್ರೀಮತಿ ಸುಶೀಲಮ್ಮ ಶ್ರೀ ಸಿದ್ದಲಿಂಗಸ್ವಾಮಿ ಇವರ ಪುತ್ರ ಶ್ರೀಮತಿ ಅನಸೂಯಮ್ಮ ಶ್ರೀ ಶಿವಯೋಗಿಸ್ವಾಮಿ ಎ.ಹೆಚ್. ಇವರ ಪುತ್ರ

**ಶ್ರೀ ಎ. ಹೆಚ್.ಚಂದ್ರಶೇಖರ್**

ಅವರು ದಿ. 07.06.2024 ರ ಸಂಜೆ 5-09 ಗಂಟೆಗೆ ಶಿವೈಕ್ಯರಾದರು.

ಮೃತರು ಧರ್ಮಪತ್ನಿ ಎ.ಹೆಚ್. ಶೋಭ, ಮಗ ಎ.ಹೆಚ್. ಆಕಾಶ್, ಮಗಳು ಎ.ಹೆಚ್. ಪೂಜಾ, ಸೊಸೆ ಎಂ.ಕೆ. ಅರ್ಪಿತಾ, ಮೊಮ್ಮಗಳು ಪುಟಾಣಿ ನಂದಿಕಾ ಹಾಗೂ ಅಪಾರ ಬಂಧು-ವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 08.06.2024ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

## ಪವಾಡರಂಗವ್ವನಹಳ್ಳಿ ಗ್ರಾಮದ ಕೆ.ಹೆಚ್. ಶಿವಮೂರ್ತಿ ನಿಧನ



ದಾವಣಗೆರೆ ತಾಲ್ಲೂಕು ಪವಾಡರಂಗವ್ವನಹಳ್ಳಿ ಗ್ರಾಮದ ದಿ. ಕಬ್ಬೂರು ಹನುಮಂತಪ್ಪ ಅವರ ಮಗನಾದ ಕೆ.ಹೆಚ್. ಶಿವಮೂರ್ತಿ (68) (ನಿವೃತ್ತ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ) ಇವರು ದಿನಾಂಕ 7.6.2024 ರ ಶುಕ್ರವಾರ ಸಂಜೆ 4 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.6.2024ರ ಶನಿವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

# ನೀಟ್ ಅಕ್ರಮದ ತನಿಖೆಗೆ ಸಿದ್ದರಾಮಯ್ಯ ಆಗ್ರಹ

ಬೆಂಗಳೂರು, ಜೂ. 7 - ನರೇಂದ್ರ ಮೋದಿ ಅವರ ಸರ್ಕಾರ ರಚನೆ ಕಸರತ್ತು ಮುಗಿದಿದ್ದರೆ, ನೊಂದ ನೀಟ್ ಪರೀಕ್ಷಾರ್ಥಿಗಳ ಅಹವಾಲು ಆಲಿಸಿ, ಪರೀಕ್ಷಾ ಅಕ್ರಮದ ಬಗ್ಗೆ ತನಿಖೆ ನಡೆಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಒತ್ತಾಯಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ನೀಟ್ ಫಲಿತಾಂಶದಲ್ಲಿ ಭಾರೀ ಅಕ್ರಮ ನಡೆದಿರಬಹುದಾದ ಶಂಕೆ ದೇಶಾದ್ಯಂತ ವ್ಯಕ್ತವಾಗುತ್ತಿದೆ ಪರೀಕ್ಷೆ ಬರೆದಿರುವ 24 ಲಕ್ಷ ಯುವಜನರು ಹಾಗೂ ಅವರ ಪೋಷಕರಲ್ಲಿ ಮೂಡಿರುವ ಆತಂಕಕ್ಕೆ, ಪರೀಕ್ಷೆ ವಿಶ್ವಾಸಾರ್ಹತೆ ಬಗ್ಗೆ ಎದ್ದಿರುವ ಪ್ರಶ್ನೆಗಳಿಗೆ ಎನ್‌ಟಿಎ ಆಗಲಿ, ಕೇಂದ್ರ ಸರ್ಕಾರವಾಗಲೀ ಉತ್ತರಿಸದೆ ಲಕ್ಷಾಂತರ ಯುವಜನರ ಭವಿಷ್ಯ ಮಣ್ಣುಪಾಲು ಮಾಡಲು ಹೊರಟಿದೆ ಎಂದು ಆರೋಪಿಸಿದ್ದಾರೆ.

ನೀಟ್ ಪರೀಕ್ಷೆಯಲ್ಲಿ 67 ಅಭ್ಯರ್ಥಿಗಳಿಗೆ 720ಕ್ಕೆ 720 ಅಂಕಗಳು ಬಂದಿವೆ, ಅಂದರೆ 100% ಅಂಕಗಳು ಬಂದಿವೆ. ಈ ಹಿಂದೆ ಬಂದ ಟಾಪರ್‌ಗಳ ಸಂಖ್ಯೆ ಎಷ್ಟು ಎಂಬುದನ್ನು ಹೋಲಿಕೆ ಮಾಡಿದರೆ ಈ ಬಾರಿಯ ಫಲಿತಾಂಶದಲ್ಲಿ ಅಕ್ರಮದ ವಾಸನೆ ಬರುತ್ತಿದೆ ಎಂದು ಹೇಳಿದ್ದಾರೆ.

2019ರಲ್ಲಿ ಒಬ್ಬ ವಿದ್ಯಾರ್ಥಿ, 2020ರಲ್ಲಿ ಒಬ್ಬ, 2021ರಲ್ಲಿ ಮೂವರು, 2022ರಲ್ಲಿ ಒಬ್ಬ, 2023ರಲ್ಲಿ ಇಬ್ಬರು ವಿದ್ಯಾರ್ಥಿಗಳು ನೂರಕ್ಕೆ ನೂರು ಪ್ರತಿಶತ ಅಂಕ ಪಡೆದಿದ್ದರೆ ಈ ವರ್ಷ 67 ವಿದ್ಯಾರ್ಥಿಗಳು ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ನೀಟ್‌ನ 67 ಟಾಪರ್‌ಗಳಲ್ಲಿ 44 ಮಂದಿ 'ಗ್ರೇಸ್‌ಮಾರ್ಕ್' ಆಧಾರದ ಮೇಲೆ ಟಾಪರ್‌ಗಳಾಗಿದ್ದಾರೆ.

ಅಚ್ಚರಿಯ ವಿಷಯವೆಂದರೆ 62 ರಿಂದ 69 ರವರೆಗಿನ ನೋಂದಿತ ಸರಣಿ ಸಂಖ್ಯೆಗಳ ನೀಟ್ ಟಾಪರ್‌ಗಳು ಹರಿಯಾಣದ ಫರಿದಾಬಾದ್‌ನಲ್ಲಿರುವ ಒಂದೇ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದವರು. ಈ ಪೈಕಿ 6 ಜನರು 720ಕ್ಕೆ 720 ಅಂಕಗಳೊಂದಿಗೆ ನೀಟ್‌ನಲ್ಲಿ ಅಗ್ರಸ್ಥಾನದಲ್ಲಿದ್ದಾರೆ ಮತ್ತು 718 ಮತ್ತು 719 ಅಂಕಗಳನ್ನು 2 ಮಂದಿ ಪಡೆದಿದ್ದಾರೆ.

ಫರಿದಾಬಾದ್‌ನ ನೀಟ್ ಪರೀಕ್ಷಾ ಕೇಂದ್ರದಲ್ಲಿ ತಪ್ಪು ಪತ್ರಿಕೆ ವಿತರಿಸಲಾಗಿತ್ತು, ಇದರಿಂದಾಗಿ ಅಭ್ಯರ್ಥಿಗಳು 45 ನಿಮಿಷ ಕಳೆದುಕೊಳ್ಳುವಂತಾಯಿತು, ಈ ವ್ಯರ್ಥ ಸಮಯಕ್ಕೆ ಪ್ರತಿಯಾಗಿ ಎನ್‌ಟಿಎ ಈ ಕೇಂದ್ರದ ಅಭ್ಯರ್ಥಿಗಳಿಗೆ 'ಗ್ರೇಸ್‌ಮಾರ್ಕ್' ನೀಡಿದೆ, ಇದು ನೂರು ಪ್ರತಿಶತ ಅಂಕ ಗಳಿಕೆಗೆ ಕಾರಣ ಎಂಬುದಾಗಿ ಕೇಂದ್ರ ಸರ್ಕಾರ ಸಮಜಾಯಿಷಿ ನೀಡುತ್ತಿದೆ.

ನಿಗದಿತ ವೇಳಾಪಟ್ಟಿಯಂತೆ ನೀಟ್ ಪರೀಕ್ಷೆಯನ್ನು ಮೇ 5, 2024 ರಂದು ನಡೆಸಲಾಯಿತು ಮತ್ತು ಅದರ ಫಲಿತಾಂಶ ಜೂನ್ 14, 2024 ರಂದು ಪ್ರಕಟವಾಗಬೇಕಿತ್ತು. ಆದರೆ ಇದ್ದಕ್ಕಿದ್ದಂತೆ ಫಲಿತಾಂಶವನ್ನು ಜೂನ್ 4, 2024 ರಂದು ಪ್ರಕಟಿಸಲಾಯಿತು.

ಇದೇ ದಿನ ಲೋಕಸಭಾ ಚುನಾವಣೆಯ ಫಲಿತಾಂಶವೂ ಬಂದಿತು, ಇಡೀ ದೇಶವೇ ಚುನಾವಣೆ ಫಲಿತಾಂಶ ಕೇಳುವುದರಲ್ಲಿ ತಲ್ಲೀನವಾಗಿತ್ತು. ಈ ಗದ್ದಲದಲ್ಲಿ ನೀಟ್ ಫಲಿತಾಂಶವನ್ನು ತರಾತುರಿಯಲ್ಲಿ ಬಿಡುಗಡೆ ಮಾಡಿದ್ದು, ಪರೀಕ್ಷೆಯ ಅಕ್ರಮಗಳನ್ನು ಮುಚ್ಚಿಹಾಕಬಹುದು ಎಂಬ ಕಾರಣಕ್ಕಾಗಿಯೇ? ಇಲ್ಲದಿದ್ದರೆ ತರಾತುರಿಯಲ್ಲಿ ಫಲಿತಾಂಶ ಬಿಡುಗಡೆ ಮಾಡಿದ್ದು ಏಕೆ? ಎಂದು ಪ್ರಶ್ನಿಸಿದ್ದಾರೆ.

# ಇದು ಫಲಿತಾಂಶವಲ್ಲ... ಪ್ರಶ್ನೆಪತ್ರಿಕೆ!

ಪ್ರತಿ ಚುನಾವಣೆಯೂ ತನ್ನದೇ ಆದ ಮಹತ್ವ ಪಡೆದಿದೆ. ಒಂದು ಚುನಾವಣೆಯ ಪರಿಣಾಮ ಕೆಲವೊಮ್ಮೆ ಇತರೆ ಚುನಾವಣೆಗಳು ಹಾಗೂ ಮುಂದಿನ ಕೆಲ ವರ್ಷಗಳವರೆಗೂ ಪ್ರಭಾವ ಬೀರಬಹುದು. ಆದರೆ, 2024ರ ಲೋಕಸಭಾ ಚುನಾವಣೆಯ ಫಲಿತಾಂಶವು ಒಂದು ರೀತಿ ಪ್ರಶ್ನೆಪತ್ರಿಕೆಯಂತೆ ರಾಜಕೀಯ ಪಕ್ಷಗಳನ್ನು ಕಾಡಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೇಂದ್ರ ಸರ್ಕಾರದಲ್ಲಷ್ಟೇ ಅಲ್ಲದೇ, ರಾಜಕೀಯ ಜೀವನದಲ್ಲಿ ಮೊದಲ ಬಾರಿಗೆ ಸ್ವಂತ ಬಹುಮತ ಹೊಂದಿರದ ಮೈತ್ರಿ ಸರ್ಕಾರವನ್ನು ಮುನ್ನಡೆಸಬೇಕಿದೆ. ದಶಕದ ನಂತರ ಮೊದಲ ಬಾರಿಗೆ ಕೇಂದ್ರದಲ್ಲಿ ಬಲಿಷ್ಠ ವಿರೋಧ ಪಕ್ಷ ದೊರೆತಿದೆ. ಪ್ರಾಂತೀಯ ಪಕ್ಷಗಳೂ ಸಹ ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವ ಸವಾಲನ್ನು ಎದುರಿಸುತ್ತಿವೆ.

2024ರ ಚುನಾವಣೆಯವರೆಗೂ ದುರ್ಬಲ ಎನಿಸಿಕೊಂಡಿದ್ದ ಕಾಂಗ್ರೆಸ್, ಈಗ ಪುಟಿದೇಳುವ ಸಾಮರ್ಥ್ಯ ಇದೆ ಎಂದು ತೋರಿಸಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪ್ರಾಂತೀಯ ಪಕ್ಷಗಳ ಜೊತೆ ಸೌಖ್ಯವಾಗಿ ಮುಂದುವರೆಯಲಿದೆಯೇ? ಅಥವಾ ಸ್ವಂತ ಬಲ ಹೆಚ್ಚಿಸಿಕೊಳ್ಳಲು ಆದ್ಯತೆ ನೀಡಲಿದೆಯೇ? ಎಂಬ ಪ್ರಶ್ನೆಯೂ ಇದೆ.

ಬಿಜೆಪಿಯು ಈಗ ಮೋದಿ ನಂತರ ಯಾರು? ಎಂಬ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸುವ ಕಾಲವೂ ಬಂದಿದೆ. ಮೋದಿ ನೇತೃತ್ವದಲ್ಲಿ 303 ಸ್ಥಾನ ಪಡೆದ 2019ರ ಕಾಲ ಉತ್ತುಂಗದ್ದು, ಮುಂದೆ ಮತ್ತೆ ಇಂತಹ ಅಚ್ಛೇ ದಿನ್ ತಂದು ಕೊಡಲು ಅವರ ಕೈಯಲ್ಲಿ ಸಾಧ್ಯವಾಗದೇ ಇರಬಹುದು.

ಸ್ವಂತ ಬಹುಮತ ಇಲ್ಲದ ಕಾರಣಕ್ಕಾಗಿ ಬಿಜೆಪಿ ಹಾಗೂ ಕಾಂಗ್ರೆಸ್‌ಗಳು ಈ ಹಿಂದೆ ದೃಢ ನಿರ್ಧಾರ ತೆಗೆದುಕೊಳ್ಳಲಾಗದೇ ಪರದಾಡಿದ್ದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಪ್ರಾಂತೀಯ ಪಕ್ಷಗಳ ಮೇಲಾಟಗಳು ರಾಷ್ಟ್ರೀಯ ಪಕ್ಷಗಳನ್ನು ದುರ್ಬಲಗೊಳಿಸಿದ ಉದಾಹರಣೆಗಳೂ ಇವೆ. ಇವೆಲ್ಲವೂ ಮುಂದಿನ ದಿನಗಳಲ್ಲಿ ಸಾಕಷ್ಟು ಸವಾಲುಗಳನ್ನು ತಂದೊಡ್ಡಲಿವೆ. ಹೀಗಾಗಿ 2024ರ ಚುನಾವಣಾ ಫಲಿತಾಂಶ ಒಂದು ರೀತಿ ಪ್ರಶ್ನೆಪತ್ರಿಕೆಯೇ ಸರಿ.

2014ರ ಚುನಾವಣೆ ಕೇಂದ್ರದಲ್ಲಿ ಮೋದಿ ಯುಗಕ್ಕೆ ದಾರಿ ಮಾಡಿಕೊಟ್ಟಿತ್ತು. 2024ರ ಚುನಾವಣೆ ಮೋದಿ ಪ್ರಭಾವಳಿ ಅಂತ್ಯವಾಗುವ ಅವಧಿಯ ಆರಂಭವೇ? ಎಂಬುದು ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. ಈ ವರ್ಷದಲ್ಲೇ ಹರಿಯಾಣ, ಮಹಾರಾಷ್ಟ್ರ ಹಾಗೂ ಜಾರ್ಖಂಡ್‌ಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿವೆ. ಸಾಧ್ಯವಾದಲ್ಲಿ ಜಮ್ಮು ಮತ್ತು ಕಾಶ್ಮೀರದ ಚುನಾವಣೆಯೂ ನಡೆಯಲಿದೆ.

ಕಳೆದ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಹರಿಯಾಣ, ಮಹಾರಾಷ್ಟ್ರ ಹಾಗೂ ಜಾರ್ಖಂಡ್‌ಗಳಲ್ಲಿ ಬಿಜೆಪಿ ಮುಖಭಂಗ ಅನುಭವಿಸಿದೆ. ಹೀಗಾಗಿ ಈ ಮೂರೂ ರಾಜ್ಯಗಳ ಚುನಾವಣೆ ಎಲ್ಲಾ ಪಕ್ಷಗಳಿಗೆ ದೊಡ್ಡ ಪ್ರಶ್ನೆಯಾಗಲಿದೆ. ಮಹಾರಾಷ್ಟ್ರದಲ್ಲಿ ವಿಪಕ್ಷಗಳನ್ನು ಒಡೆದಿದ್ದು ಹಾಗೂ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದು ವಿಪಕ್ಷಗಳು ಬಿಜೆಪಿ ವಿರುದ್ಧ ಆಕ್ರೋಶಗೊಳ್ಳಲು ಕಾರಣವಾಗಿದೆ.

ಕಾಂಗ್ರೆಸ್ ಮುಕ್ತ ಭಾರತದ ಕನಸಿನಲ್ಲಿದ್ದ ಬಿಜೆಪಿ, ಇಂತಹ ಆಕ್ರೋಶಗಳನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಒಂದರ ಹಿಂದೊಂದರಂತೆ ವಿಪಕ್ಷಗಳ ನಾಯಕರು ಹಲವಾರು ಭ್ರಷ್ಟಾಚಾರ ಪ್ರಕರಣಗಳನ್ನು ಎದುರಿಸುವಂತಾಗಿತ್ತು. ವಿಪಕ್ಷಗಳು ಗಟ್ಟಿ ಮೈತ್ರಿಗೆ ಬರಲು ಒಂದು ರೀತಿಯಲ್ಲಿ ಈ ಪ್ರಕರಣಗಳೇ ಪ್ರಮುಖ ಅಂಟಿನಂತೆ ಕಾರ್ಯನಿರ್ವಹಿಸಿದವು ಕಳೆದ ಎರಡು ಚುನಾವಣೆಗಳಿಗೆ ಹೋಲಿಸಿದರೆ, ಈ ಬಾರಿ 'ದುರ್ಬಲ'ವಾಗಿರುವ ಮೋದಿ ಸರ್ಕಾರದ ವಿರುದ್ಧ ಮುಗಿಬೀಳಲು ವಿಪಕ್ಷಗಳು ಸನ್ನದ್ಧವಾಗಿವೆ. ಇದೂ ಬಿಜೆಪಿ ಪಾಲಿಗೆ ಪ್ರಮುಖ ಪ್ರಶ್ನೆಯಾಗಲಿದೆ.

ಜವಾಹರಲಾಲ್ ನೆಹರು ಅವರ ಸತತ ಮೂರು ಗೆಲುವಿನ ಸಾಧನೆ ಸರಿಗಟ್ಟಲು ಪ್ರಧಾನಿ ಮೋದಿ ಅವರಿಗೆ ಸಾಧ್ಯವಾಗಿದೆ. ನೆಹರು ಅವರು ಮೂರನೇ ಬಾರಿ ಪ್ರಧಾನಿಯಾದಾಗ, ನೆಹರು ನಂತರ ಯಾರು ? ಎಂಬ ಪ್ರಶ್ನೆ ಗಂಭೀರವಾಗಿ ಕಾಡಿತ್ತು. ಈಗ ಅದೇ ಪ್ರಶ್ನೆ ಬಿಜೆಪಿಗೆ ಕಾಡಲಿದೆ. ಅವಧಿ ಮೀರಿದ ನಾಯಕರು ಪಕ್ಷಕ್ಕೆ ಮುಳುವಾಗುವುದು ಹೊಸತೇನೂ ಅಲ್ಲ. ಬಲಿಷ್ಠ ಉತ್ತರಾಧಿಕಾರಿಯನ್ನು ಸಿದ್ಧಪಡಿಸುವ ಹೊಣೆ ಬಿಜೆಪಿ ಹಾಗೂ ಮೋದಿ ಮೇಲಿದೆ. ಹೀಗೆ 2024ರ ಚುನಾವಣೆ ಸಾಲು ಸಾಲು ಪ್ರಶ್ನೆಗಳನ್ನು ಹೊತ್ತು ತಂದಿದೆ. ರಾಜಕೀಯ ಪಕ್ಷಗಳು ಎಷ್ಟು ಪರಿಶ್ರಮದಿಂದ ಉತ್ತರ ಬರೆಯುತ್ತವೆ ಎನ್ನುವುದರ ಮೇಲೆ ಅವರ ಫಲಿತಾಂಶವೂ ನಿರ್ಧಾರವಾಗಲಿದೆ.

- ಬಿ.ಜಿ. ಪ್ರವೀಣ್ ಕುಮಾರ್, ದಾವಣಗೆರೆ

## 200 ಗಡಿ ದಾಟಲು ಅಟಲ್, ಅದ್ವಾನಿಗೂ ಆಗಿರಲಿಲ್ಲ



2024ರ ಫಲಿತಾಂಶ ಪ್ರಧಾನಿ ಮೋದಿ ಅವರ ನೈತಿಕ ಸೋಲು ಎಂದು ಕಾಂಗ್ರೆಸ್ ಪಕ್ಷ ಬಣ್ಣಿಸುತ್ತಿದೆ. ಎನ್.ಡಿ.ಎ. ಮೈತ್ರಿಕೂಟದ ನೇತೃತ್ವ ವಹಿಸಿ, ಗೆಲುವಿಗೆ ಅಗತ್ಯಕ್ಕಿಂತಲೂ ಇಪ್ಪತ್ತು ಸೀಟು ತಂದು ಕೊಟ್ಟ ನಂತರವೂ ಮೋದಿ ಇಂತಹ ಆರೋಪ ಎದುರಿಸಬೇಕಾಗಿ ಬಂದಿದೆ. ಇದಕ್ಕೆ ಸ್ವತಃ ಮೋದಿ ಅವರೇ ಕಾರಣ ಎಂಬುದೂ ವಿಪರ್ಯಾಸ!

ಸತತ ಎರಡು ಬಾರಿ ಬಿಜೆಪಿಗೆ ಸ್ಪಷ್ಟ ಬಹುಮತ ದೊರೆತ ನಂತರ, ಅವರು ಅಬ್ ಕಿ ಬಾರ್ 400 ಪಾರ್ ಎಂದಿದ್ದರು. ಅವರ ಈ ರಣಕಹಳೆಯೇ ಈಗ ಪ್ರತಿಪಕ್ಷಗಳ ಟೀಕೆಗೆ ಅಸ್ತ್ರವಾಗಿದೆ. ಆದರೆ, ವಾಸ್ತವಿಕವಾಗಿ ಮೋದಿ ನೇತೃತ್ವದಲ್ಲಿ ಬಿಜೆಪಿ ಸಾಧನೆ ಅಷ್ಟು ಕಳಪೆಯೇ?

ಸ್ವಂತ ಬಲದ ಮೇಲೆ ಸರ್ಕಾರ ರಚಿಸಲು ಅಗತ್ಯವಾದ 272 ಗಳಿಸಲು ಸಾಧ್ಯವಾಗಲಿಲ್ಲ ಎಂಬುದೇ ಮೋದಿ ವಿರುದ್ಧದ ಟೀಕೆಗೆ ಕಾರಣವಾಗಿದೆ. ಆದರೆ, 1989ರಿಂದ 2014ರ ನಡುವೆ ಎರಡು ಬಾರಿ ಮಾತ್ರ ಪಕ್ಷವೊಂದು 200ರ ಗಡಿ ದಾಟಲು ಸಾಧ್ಯವಾಗಿದೆ. ಎರಡೂ ಬಾರಿ ಕಾಂಗ್ರೆಸ್‌ನಿಂದ ಮಾತ್ರ ಅಂತಹ ಸಾಧನೆ ಸಾಧ್ಯವಾಗಿದೆ.

ಅಟಲ್ ಬಿಹಾರಿ ವಾಜಪೇಯಿ ಹಾಗೂ ಎಲ್.ಕೆ. ಅದ್ವಾನಿ ಅಂತಹ ನಾಯಕರಿಂದಲೇ ಬಿಜೆಪಿಯನ್ನು 200ರ ಗಡಿ ದಾಟಿಸಲು ಸಾಧ್ಯವಾಗಲಿಲ್ಲ. ಮೋದಿ ನೇತೃತ್ವದಲ್ಲಿ ಬಿಜೆಪಿ ಎರಡು ಬಾರಿ ಸ್ವಂತ ಬಲದ ಬಹುಮತ ಪಡೆದಿದೆ. ಈ ಬಾರಿ 240 ಸ್ಥಾನ ಗಳಿಸಿರುವುದು ಕಡಿಮೆ ಸಾಧನೆಯೇನಲ್ಲ.

# ನಾಯ್ಡು ಗೆಲುವಿನಿಂದ ಅಮರಾವತಿಗೆ ಶುಕ್ರದೆಸೆ

ಅಮರಾವತಿ, ಜೂ. 76 – ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಟಿ.ಡಿ.ಪಿ. ಜಯಭೇರಿ ಬಾರಿಸಿರುವ ಹಿನ್ನೆಲೆಯಲ್ಲಿ ಅಮರಾವತಿ ರಾಜಧಾನಿಯ ಅಭಿವೃದ್ಧಿ ಯೋಜನೆ ಮತ್ತೆ ಮುನ್ನೆಲೆಗೆ ಬಂದಿದೆ.

ಎನ್. ಚಂದ್ರಬಾಬು ನಾಯ್ಡು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಆಂಧ್ರ ಪ್ರದೇಶದ ವಿಭಜನೆಯಾಗಿತ್ತು. ಆಗ ಅವರು ಅಮರಾವತಿಯನ್ನು ಹೊಸ ರಾಜಧಾನಿ ಮಾಡುವ ನಿರ್ಧಾರ ತೆಗೆದುಕೊಂಡಿದ್ದರು. ವಿಜಯವಾಡ ಹಾಗೂ ಗುಂಟೂರು ನಗರಗಳ ನಡುವಿನ 29 ಹಳ್ಳಿಗಳ ವ್ಯಾಪ್ತಿಯಲ್ಲಿ ರಾಜಧಾನಿ ನಿರ್ಮಾಣಕ್ಕೆ ನಿರ್ಧರಿಸಲಾಗಿತ್ತು.

ಇದಕ್ಕಾಗಿ ನಾಯ್ಡು 30 ಸಾವಿರ ಎಕರೆ ಜಾಗವನ್ನು ರೈತರಿಂದ ವಶಪಡಿಸಿಕೊಂಡಿದ್ದರು. ಅಕ್ಟೋಬರ್ 22, 2015ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಈ ನಗರಕ್ಕೆ ಶಿಲಾನ್ಯಾಸ ನೆರವೇರಿಸಿದ್ದರು.

ಆದರೆ, 2019ರಲ್ಲಿ ಟಿ.ಡಿ.ಪಿ. ಅಧಿಕಾರ ಕಳೆದುಕೊಂಡಿತು. ನಂತರ ಅಧಿಕಾರಕ್ಕೆ ಬಂದ ವೈ.ಎಸ್.ಆರ್.ಸಿ.ಪಿ.ಯ ಜಗನ್ ಮೋಹನ್ ರೆಡ್ಡಿ, ಅಮರಾವತಿ ಯೋಜನೆಗೆ ತಣ್ಣೀರೆರಚಿದರು.

ಆಂಧ್ರ ಪ್ರದೇಶಕ್ಕೆ ಮೂರು ರಾಜಧಾನಿ ಮಾಡುವ ವಿನೂತನ ಯೋಜನೆಗೆ ರೆಡ್ಡಿ ಮುಂದಾದರು. ಆದರೆ, 2024ರ ಚುನಾವಣೆಯಲ್ಲಿ ರೆಡ್ಡಿ ಮುಖಭಂಗಕ್ಕೀಡಾಗುವುದರೊಂದಿಗೆ ಮೂರು ರಾಜಧಾನಿಗಳ ಯೋಜನೆಗೆ ತೆರೆ ಬಿದ್ದಂತಾಗಿದೆ.

ಅಮರಾವತಿಯನ್ನು ಆಂಧ್ರದ ರಾಜಧಾನಿಯಾಗಿ ಅಭಿವೃದ್ಧಿ ಪಡಿಸುವುದಾಗಿ ನಾಯ್ಡು ಅವರು ಏಪ್ರಿಲ್ 30ರಂದು ಬಿಡುಗಡೆ ಮಾಡಿದ್ದ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದರು.

ಅಮರಾವತಿಯನ್ನು ರಾಜ್ಯದ ಏಕೈಕ ರಾಜಧಾನಿಯಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ಟಿ.ಡಿ.ಪಿ. ಪ್ರಧಾನ ಕಾರ್ಯದರ್ಶಿ ಎನ್. ಲೋಕೇಶ್ ತಿಳಿಸಿದ್ದಾರೆ.

ಅಮರಾವತಿ ಮರು ನಿರ್ಮಾಣ ನಮ್ಮ ಪ್ರಥಮ ಆದ್ಯತೆಯಾಗಿದೆ ಎಂದು ಟಿ.ಡಿ.ಪಿ. ವಕ್ತಾರರಾದ ಜ್ಯೋತ್ಸ್ನಾ ತಿರುನಗರಿ ತಿಳಿಸಿದ್ದಾರೆ.

# ಹಲಗೇರಿಯಲ್ಲಿ ಇಂದು ಉಚಿತ ನೇತ್ರಾ ಪರೀಕ್ಷಾ ಶಿಬಿರ

ರಾಣೇಬೆನ್ನೂರು ತಾಲ್ಲೂಕಿನ ಹಲಗೇರಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಂದು ನುರಿತ ನೇತ್ರ ತಜ್ಞರಿಂದ ನೇತ್ರ ತಪಾಸಣೆ ಹಾಗೂ ಅವಶ್ಯವಿದ್ದವರಿಗೆ ಶಂಕರ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ನೀಡಲಾಗುವುದು. ಹಲಗೇರಿ ಗ್ರಾಮ ಪಂಚಾಯತಿ, ಲಯನ್ಸ್ ಕ್ಲಬ್, ಜಿಲ್ಲಾ ಆರೋಗ್ಯ ಘಟಕ, ಡಾ. ರಂಜನಾನಾಯ್ಕ ಟ್ರಸ್ಟ್, ಸ್ವಾಭಿಮಾನಿ ಕನ್ನಡ ಸಂಘಟನೆ, ಜಿಲ್ಲಾ ನೇತ್ರ ಸಂಚಾರಿ ಘಟಕ ಜಂಟಿಯಾಗಿ ಶಿಬಿರವನ್ನು ಆಯೋಜಿಸಿವೆ.

# ಅದ್ವಾನಿ, ಜೋಷಿ ಭೇಟಿ ಮಾಡಿದ ನರೇಂದ್ರ ಮೋದಿ

ನವದೆಹಲಿ, ಜೂ. 7 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅದ್ವಾನಿ ಹಾಗೂ ಮುರಳಿ ಮನೋಹರ ಜೋಷಿ ಅವರ ನಿವಾಸಕ್ಕೆ ತೆರಳಿ ಭೇಟಿ ಮಾಡಿದ್ದಾರೆ.

ಸತತ ಮೂರನೇ ಬಾರಿ ಸರ್ಕಾರ ರಚಿಸುವುದಕ್ಕೆ ಮುಂಚೆ ಅವರು ಬಿಜೆಪಿಯ ಹಿರಿಯ ನಾಯಕರನ್ನು ಭೇಟಿ ಮಾಡಿದ್ದಾರೆ. ನಂತರ ಅವರು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನೂ ಭೇಟಿ ಮಾಡಿದ್ದಾರೆ.

# 5 ಸಾವಿರ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ದಾವಣಗೆರೆ, ಜೂ. 7- ನಗರದ ಹೊರವಲಯದ ಶಿವನಗರದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಆವರಣದಲ್ಲಿ 5 ಸಾವಿರ ಸಸಿ ನೆಡುವ ಕಾರ್ಯಕ್ರಮಕ್ಕೆ ಹಿರಿಯ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣನವರ ಇಂದು ವಿಧ್ಯುಕ್ತ ಚಾಲನೆ ನೀಡಿದರು.

ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಮಾಲಿನ್ಯ ನಿಯಂತ್ರಣ ಪ್ರಾದೇಶಿಕ ಅಧಿಕಾರಿ ಡಾ.ಹೆಚ್. ಲಕ್ಷ್ಮಿಕಾಂತ್, ಪಾಲಿಕೆ ಪರಿಸರ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಾನಗರ ಪಾಲಿಕೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರುಗಳ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿತ್ತು.

# ಅಂತರರಾಷ್ಟ್ರೀಯ ಯೋಗಾಸನ ಸ್ಪರ್ಧೆ

# ಕರ್ನಾಟಕ ತಂಡಕ್ಕೆ ಪ್ರಥಮ ಸ್ಥಾನ, ಸ್ವರ್ಣ ಪದಕ



ದಾವಣಗೆರೆ, ಜೂ.7- ಸ್ಕೂಲ್ ಗೇಮ್ಸ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಫೌಂಡೇಶನ್ (ತಮಿಳುನಾಡು) ಮತ್ತು ಸ್ಕೂಲ್ ಗೇಮ್ಸ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಫೌಂಡೇಶನ್ ಇಂಡಿಯಾ ಇವರ ಸಂಯುಕ್ತ ಆಶ್ರಯದಲ್ಲಿ ಕಳೆದ ವಾರ ನಡೆದ ಐದನೇ ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳು ಗೋವಾದ ಡೆಕಾತ್ಲಾನ್ ಆವರಣದಲ್ಲಿ ನಡೆದ ಅಂತರರಾಷ್ಟ್ರೀಯ ಯೋಗಾಸನ ಸ್ಪರ್ಧೆಯಲ್ಲಿ ದಾವಣಗೆರೆ ಜಿಲ್ಲೆಯು ಸ್ಪರ್ಧೆಯಲ್ಲಿ ಭಾಗವಹಿಸಿ, ಪ್ರಥಮ ಸ್ಥಾನ ಗಳಿಸುವುದರ ಮೂಲಕ ತಂಡದ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

14ನೇ ವಯಸ್ಸಿನ ಬಾಲಕರ ವಿಭಾಗದಲ್ಲಿ ಹರಿಹರದ ಪ್ರಥಮ್ ಯು. ಎಂ. ಪ್ರಥಮ ಸ್ಥಾನ ಪಡೆಯುವುದರ ಮೂಲಕ ಸ್ವರ್ಣ ಪದಕ, 14 ನೇ ವಯಸ್ಸಿನ ಬಾಲಕಿಯರ ವಿಭಾಗದಲ್ಲಿ ಕುಮಾರಿ ಶ್ರೇಯ ಶಿವಪೂಜಿ ಪ್ರಥಮ ಸ್ಥಾನ ಪಡೆಯುವುದರ ಮೂಲಕ ಸ್ವರ್ಣ ಪದಕ, 17ನೇ ವಯಸ್ಸಿನ ಬಾಲಕಿಯರ ವಿಭಾಗದಲ್ಲಿ ತುಮಕೂರಿನ ಮೀನಾಕ್ಷಿ ಪ್ರಥಮ ಸ್ಥಾನ ಪಡೆಯುವುದರ ಮೂಲಕ ಸ್ವರ್ಣ ಪದಕ, 49ನೇ ಹಿರಿಯ ಪುರುಷರ ವಿಭಾಗದಲ್ಲಿ ಧಾರವಾಡ ಜಿಲ್ಲೆಯ ಹಿರೇಹೊನ್ನಳ್ಳಿ ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯರಾದ ಮಯೂರ ಗೌಡ ಎಸ್. ಪಾಟೀಲ್ ಪ್ರಥಮ ಸ್ಥಾನ ಗಳಿಸುವುದರ ಮೂಲಕ ಸ್ವರ್ಣ ಪದಕ, 60 ವರ್ಷ ಪುರುಷರ ಹಿರಿಯರ ವಿಭಾಗದಲ್ಲಿ ಡಾಕ್ಟರೇಟ್ ಪುರಸ್ಕೃತ ಕೆ. ಜೈಮುನಿ ಪ್ರಥಮ ಸ್ಥಾನ ಗಳಿಸುವುದರ ಮೂಲಕ ಸ್ವರ್ಣ ಪದಕವನ್ನು ಗಳಿಸಿರುತ್ತಾರೆ.

ತಂಡದ ಪ್ರಶಸ್ತಿಯನ್ನು ಸಂಸ್ಥೆಯ ಅಧ್ಯಕ್ಷರಾದ ಅಜಿತ್ ತಮಿಳುನಾಡು ಅವರು ನೀಡಿದರು.

ವಿಜೇತರನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಬಿ.ಪಿ. ಹರೀಶ್, ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್, ಜಿಲ್ಲಾ ಕ್ರೀಡಾ ಅಧ್ಯಕ್ಷ ಕೆ. ದಿನೇಶ್ ಶೆಟ್ಟಿ, ದಾವಣಗೆರೆ ಸಪ್ತರಿಷಿ ಯೋಗದಾರ್ ಸ್ಪೋರ್ಟ್ಸ್ ಅಕಾಡೆಮಿಯ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.



# ಶಾಮನೂರಿನಲ್ಲಿ ಪರಿಸರ ದಿನಾಚರಣೆ

ದಾವಣಗೆರೆ, ಜೂ. 7 - ಶಾಮನೂರಿನ ಶ್ರೀ ಮಾರಿಕಾಂಬ ದೇವಿ ದೇವಸ್ಥಾನದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಯೋಜನಾಧಿಕಾರಿ ಬಾಲಕೃಷ್ಣ ನಾಯಕ್ ಅವರು ಮಾತನಾಡಿ, ಅಭಿವೃದ್ಧಿ ಹೊಂದುತ್ತಿರುವ ಸಮಾಜದಲ್ಲಿ ಪರಿಸರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವಾಗಿದೆ. ಪ್ರತಿಯೊಬ್ಬರೂ ಇಂತಹ ಕಾರ್ಯಕ್ರಮದಲ್ಲಿ ಕೈಜೋಡಿಸಬೇಕು. ದೇವನಗರಿ ಯೋಜನಾ ಕಚೇರಿಯ ವ್ಯಾಪ್ತಿಯಲ್ಲಿ 10 ಕಡೆಗಳಲ್ಲಿ ಸಸಿ ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮಾರಿಕಾಂಬ ದೇವಸ್ಥಾನ ಕಮಿಟಿಯ ರಾಜಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೇಲ್ವಿಚಾರಕ ತಿಮ್ಮಪ್ಪ ಸ್ವಾಗತಿದರು.

# ವಿದ್ಯಾರ್ಥಿನಿಯರ ಹಾಸ್ಟೆಲ್‌ಗೆ ಅರ್ಜಿ

ದಾವಣಗೆರೆ, ಜೂ. 7 - ಬಸವ ಬಳಗದ ವತಿಯಿಂದ ವಿದ್ಯಾರ್ಥಿ ನಿಲಯದಲ್ಲಿ ಪಿ.ಯು.ಸಿ., ಡಿಗ್ರಿ,ಇಂಜಿನಿಯರಿಂಗ್ ಮತ್ತು ಬಿ.ಎಸ್.ಸಿ. ಬಿಎಡ್ ಹಾಗೂ ನರ್ಸಿಂಗ್ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ 2024-25ನೇ ಸಾಲಿಗೆ ಪ್ರವೇಶ ಪ್ರಾರಂಭವಾಗಿದೆ. ವಿವರಕ್ಕೆ ಸಂಪರ್ಕಿಸಿ: 99720 84938, 90084 09498.

# ಪೊಲೀಸ್ ಪಬ್ಲಿಕ್ ಸ್ಕೂಲ್‌ನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ.6- ಪೊಲೀಸ್ ಪಬ್ಲಿಕ್ ಸ್ಕೂಲ್‌ನಲ್ಲಿ ಬುಧವಾರ ವಿಶ್ವ ಪರಿಸರ ದಿನದ ಅಂಗವಾಗಿ 'ನಮ್ಮ ಭೂಮಿ-ನಮ್ಮ ಭವಿಷ್ಯ' ಘೋಷ ವಾಕ್ಯದಡಿ ವಿಶ್ವ ಪರಿಸರ ದಿನವನ್ನು ವಿಶೇಷವಾಗಿ ಆಚರಿಸಲಾಯಿತು.

ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಚಿತ್ರಕಲೆ, ಪೋಸ್ಟರ್ ರಚನೆ ಮತ್ತು ರಂಗೋಲಿ ಸ್ಪರ್ಧೆಯಂತಹ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿಗಳು ಎಲ್ಲರ ಗಮನ ಸೆಳೆದರು.

ದೈನಂದಿನ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆ ಸಂಪೂರ್ಣವಾಗಿ ನಿಷೇಧಿಸಬೇಕು ಮತ್ತು ಪರಿಸರಕ್ಕೆ ಪೂರಕವಾಗಿ ಸರಳ ಜೀವನ ನಡೆಸುವಂತೆ 2ನೇ ವಿಭಾಗದ ಸಿವಿಲ್ ನ್ಯಾಯಾಧೀಶರಾದ ವೀಣಾ ಕೋಲೆಕರ್ ವಿದ್ಯಾರ್ಥಿಗಳಿಗೆ ಹೇಳಿದರು.

ಡಿವೈ.ಆರ್‌ಎಫ್‌ಓ ಮೊಹಮ್ಮದ್ ಖಾಲಿದ್ ಮಾತನಾಡಿ, ಪ್ರಕೃತಿಯು ಆಮ್ಲಜನಕದ ಕಾರ್ಖಾನೆಯಾಗಿ ಕಾರ್ಯ ನಿರ್ವಹಿಸುವ ಬಗ್ಗೆ ವಿವರಿಸಿದ ಅವರು, ಪರಿಸರ ವರ್ಧನೆಯಲ್ಲಿ ಮನುಷ್ಯನ ಪಾತ್ರ ತಿಳಿಸಿದರು.

ಡಿವೈ.ಎಸ್ಪಿ, ಡಿಎಆರ್ ನಿಶಿಮಪ್ಪ ಹನಕನಹಳ್ಳಿ ಮಾತನಾಡಿ, ಇಂದಿನ ದಿನಗಳಲ್ಲಿ ಪರಿಸರ ಕಾಳಜಿ ಮಾಡದಿದ್ದರೆ ಮಾನವ ವಿನಾಶಕ್ಕೆ ಸೇರುತ್ತಾನೆ. ಈ ನಿಟ್ಟಿನಲ್ಲಿ 'ವೃಕ್ಷೋ ರಕ್ಷತಿ ರಕ್ಷಿತಃ' ಎಂಬಂತೆ ವೃಕ್ಷಗಳನ್ನು ಹೆಚ್ಚು ಬೆಳೆಸಬೇಕು ಎಂದು ಹೇಳಿದರು.

ಈ ವೇಳೆ ಪ್ರಾಚಾರ್ಯ ಎಚ್.ವಿ ಯತೀಶ್, ಆರ್‌ಪಿಐ, ಡಿಎಆರ್ ಎಚ್.ಬಿ ಸೋಮಶೇಖರ್, ಅರಣ್ಯ ರಕ್ಷಕ ವೆಂಕಟೇಶ್, ಶಿಕ್ಷಕಿಯರಾದ ಎಂ. ಸಲ್ಮಾ ಬಾನು, ದೀಪಾ, ವಿದ್ಯಾರ್ಥಿಗಳಾದ ಅನ್ವಯಿ, ಪರಿಮಳಾ, ಯಶಸ್ ಇದ್ದರು.

# ಫಲಿತಾಂಶ ತನಿಖೆಗೆ ಎನ್‌ಎಸ್‌ಯುಐ ಆಗ್ರಹ

ದಾವಣಗೆರೆ, ಜೂ.7- ಜೂ.14ರಂದು ಪ್ರಕಟವಾಗಬೇಕಿದ್ದ ಪ್ರಸಕ್ತ ಸಾಲಿನ ನೀಟ್ ಪರೀಕ್ಷೆ ಫಲಿತಾಂಶ ಜೂ.4ರಂದು ಪ್ರಕಟವಾಗಿರುವುದು ಅನುಮಾನ ಸೃಷ್ಟಿಸಿದೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡುವಂತೆ ಎನ್‌ಎಸ್‌ಯುಐ ವಿದ್ಯಾರ್ಥಿ ಸಂಘಟನೆ ಸರ್ಕಾರಕ್ಕೆ ಒತ್ತಾಯಿಸಿದೆ.

720 ಕ್ಕೆ 720 ಅಂಕ ಗಳಿಸಿದ 64 ವಿದ್ಯಾರ್ಥಿಗಳ ಪೈಕಿ 12 ಜನ ವಿದ್ಯಾರ್ಥಿಗಳು ಒಂದೇ ಪರೀಕ್ಷಾ ಕೇಂದ್ರ, ಒಂದೇ ರಾಜ್ಯ ಮತ್ತು ಒಂದೇ ಜಿಲ್ಲೆಯವರಾಗಿರುವುದು ಅನೇಕ ಪ್ರಶ್ನೆ ಹುಟ್ಟು ಹಾಕುತ್ತಿದೆ ಎಂದಿದ್ದಾರೆ.

ಟೆಲಿಗ್ರಾಂ ಗ್ರೂಪ್‌ಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಅನೇಕ ವಿದ್ಯಾರ್ಥಿಗಳಿಗೆ ಗ್ರೇಸ್ ಅಂಕ ಕೊಟ್ಟಿರುವ ಬಗ್ಗೆ ಸ್ಪಷ್ಟ ಮಾಹಿತಿ ಎನ್.ಟಿ.ಎ ನೀಡಿಲ್ಲ ಎಂದು ಸಂಘಟನೆ ದೂರಿದೆ. ಪರೀಕ್ಷೆಗಾಗಿ ಎರಡೆರಡು ವರ್ಷಗಳಿಂದ ಓದಿದ ಲಕ್ಷಾಂತರ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ತನಿಖೆ ಕೈಗೊಳ್ಳಬೇಕು. ಇಲ್ಲದಿದ್ದರೆ ಬರುವ ದಿನಗಳಲ್ಲಿ ಎನ್‌ಎಸ್‌ಯುಐ ಪ್ರತಿಭಟನೆ ಮಾಡಲಿದೆ ಎಂದು ಪ್ರಕಟಣೆ ತಿಳಿಸಿದೆ.

# ಹರಪನಹಳ್ಳಿ : ಗ್ರಂಥಾಲಯವೇ ನನಗೆ ಪ್ರಥಮ ಮನೆ



## ಲೇಖಕ ಜಿ.ಬಿ. ನಾಗನಗೌಡ

ಹರಪನಹಳ್ಳಿ, ಜೂ. 7 - ನಾನು ಬಾಲ್ಯದಿಂದಲೂ ಸಾಹಿತ್ಯವನ್ನು ಉಸಿರಾಗಿಸಿಕೊಂಡು ಬಂದವನು. ಅಂದಿನ ಕಾಲದಲ್ಲಿ ಗ್ರಂಥಾಲಯವೇ ನನಗೆ ಪ್ರಥಮ ಮನೆಯಾಗಿತ್ತು ಎಂದು ಲೇಖಕ ಜಿ.ಬಿ. ನಾಗನಗೌಡ ಹೇಳಿದರು.

ಪಟ್ಟಣದ ಅಂಬ್ಲಿ ದೊಡ್ಡ ಭರ್ಮಪ್ಪ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರೊ. ಫೆಸರ್ ಜಿ.ಬಿ. ನಾಗನಗೌಡ ವಿರಚಿತ ಉತ್ಖನನ ನಾಟಕ ಸಂಕಲನ ಲೋಕಾರ್ಪಣೆ ಹಾಗೂ ತಮ್ಮ ವಯೋ ನಿವೃತ್ತಿ ಬೀಳ್ಕೊಡುಗೆ ಸಮಾರಂಭವನ್ನು ಕುರಿತು ಮಾತನಾಡಿದ ಅವರು ನನ್ನ ನಿವೃತ್ತಿ ಬದುಕನ್ನು ನಾನು ಸಾಹಿತ್ಯ ಕ್ಷೇತ್ರಕ್ಕೆ ಮೀಸಲಿಡುತ್ತೇನೆ ಎಂದರು.

ನಾನು ಪಿಯುಸಿ ಓದುತ್ತಿರುವಾಗಲೇ ಉಪನ್ಯಾಸಕನಾಗಬೇಕೆಂದು ಅಂದುಕೊಂಡಿದ್ದೆ. ಉಪನ್ಯಾಸಕ ವೃತ್ತಿಯನ್ನು ನಾನು ತುಂಬಾ ಪ್ರೀತಿಸುತ್ತಿದ್ದೆ ಹಾಗಾಗಿ ನಾನು ಉಪನ್ಯಾಸಕ ವೃತ್ತಿಯನ್ನು ಆರಿಸಿಕೊಂಡೆ ನೀವು ಒಂದು ಅಚಲವಾದ ಗುರಿ ಇಟ್ಟುಕೊಂಡು ನಿರಂತರ ಅಭ್ಯಾಸ ಮಾಡಿದ್ದೇ ಆದರೆ ಖಂಡಿತವಾಗಿಯೂ ನೀವು ಆ ಗುರಿ ಸಾಧಿಸಬಹುದು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಈ ಸಮಾರಂಭದಲ್ಲಿ ಪ್ರಾಂಶುಪಾಲ ಡಾ. ಸಿದ್ದಲಿಂಗಮೂರ್ತಿ, ಸಾಹಿತಿ ತೆಲಿಗಿ ವೀರಭದ್ರಪ್ಪ, ಕೋರಿ ವಿರೂಪಾಕ್ಷಪ್ಪ, ಐಗೋಳ ಚಿದಾನಂದ, ಅಕ್ಕಿ ಶಿವಕುಮಾರ, ಮೋಹನ್ ರೆಡ್ಡಿ, ಮಲ್ಲಿಕಾರ್ಜುನಗೌಡ್ರು, ಜಯಲಕ್ಷ್ಮಿ ನಾಗನಗೌಡ, ಸುವರ್ಣ ಆರುಂಡಿ ನಾಗರಾಜ್, ಸಿ. ನವಾಜ್ ಬಾಷಾ, ರಾಜಶೇಖರಯ್ಯ, ಮಂಜುನಾಥ, ರಾಮಚಂದ್ರ ಶಾಸ್ತ್ರಿ, ಮಧುಸೂದನ್, ಹಾಲಪ್ಪ, ಗಂಗಪ್ಪ, ರವಿ ನಾಯ್ಕ್, ಎಂ.ಪಿ.ಎಂ. ಸಿದ್ದೇಶ್ವರ, ತಳವಾರ ಚಂದ್ರಪ್ಪ, ಹಡೇಗಾರ ರಮೇಶ್, ಮಂಜ್ಯಾನಾಯ್ಕ್, ಪ್ರದೀಪ್, ವಿದ್ಯಾರ್ಥಿ ಕಾರ್ಯದರ್ಶಿ ರೇಣುಕ ಪ್ರಸಾದ್ ಕಲ್ಮಠ ಸೇರಿದಂತೆ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು, ವಿದ್ಯಾರ್ಥಿ ಪ್ರತಿನಿಧಿಗಳು, ಹಳೆ ವಿದ್ಯಾರ್ಥಿ ಬಳಗದವರು ಇದ್ದರು.

# ಪರಿಸರ ರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಲಿ



## ಹರಪನಹಳ್ಳಿ

ಹರಪನಹಳ್ಳಿ, ಜೂ.7- ಜಾಗತಿಕ ತಾಪಮಾನ ಹಾಗೂ ಪರಿಸರವನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ವಾಲ್ಮೀಕಿ ನಾಯಕ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಎಚ್.ಟಿ. ವನಜಾಕ್ಷಮ್ಮ ಹೇಳಿದರು.

ತಾಲ್ಲೂಕಿನ ಹಲವಾಗಲು ಗ್ರಾಮದ ಶ್ರೀ ಮಾರುತಿ ಪಬ್ಲಿಕ್ ಶಾಲೆಯ ಆವರಣದಲ್ಲಿ ಸಸಿ ನೆಡುವುದರ ಮೂಲಕ ವಿಶ್ವ ಪರಿಸರ ದಿನ ಆಚರಿಸಿ, ಮಾತನಾಡಿದರು.

ಪರಿಸರದ ಮೇಲೆ ದುಷ್ಪರಿಣಾಮ ಬೀರಲು ಜಾಗತಿಕ ತಾಪಮಾನವೇ ಕಾರಣ. ಆದ್ದರಿಂದ ಪರಿಸರಕ್ಕೆ ಕುತ್ತು ತರುವ ಎಲ್ಲ ರೀತಿಯ ಶೋಷಣೆ, ಚಟುವಟಿಕೆ ನಿಲ್ಲಿಸಿದಾಗ ಮಾತ್ರ ಮುಂದಿನ ಪೀಳಿಗೆಗೆ ಉತ್ತಮ ಪರಿಸರ ನೀಡಬಹುದು ಎಂದರು.

ವಾತಾವರಣ, ಜಲಮೂಲ ಮತ್ತು ಜೀವರಾಶಿಗಳು ಮಾಲಿನ್ಯಕಾರಕಗಳೊಂದಿಗೆ ಅಂಟಿಕೊಂಡ ಕಾರಣ ಪರಿಸರವು ಹೆಚ್ಚಿನ ಪ್ರಮಾಣದ ಅಪಾಯದಲ್ಲಿದೆ. ಆದ್ದರಿಂದ ಪರಿಸರ ದಿನಾಚರಣೆ ಜೂನ್ ಮಾಸಕ್ಕೆ ಸೀಮಿತವಾಗದೆ ನಿತ್ಯವೂ ಆಗಬೇಕು ಎಂದರು. ಶಾಲಾ ಮುಖ್ಯಸ್ಥರಾದ ವಾಮದೇವಪ್ಪ ಪೂಜಾರ್, ಮಂಜುನಾಥ ಪೂಜಾರ್, ಮಹೇಶ್, ಗ್ರಾಮ ಲೆಕ್ಕಾಧಿಕಾರಿ ನಾಗರಾಜ್, ಶಿಕ್ಷಕ ಚೇತನ್ ಸಣ್ಣಕ್ಕಿ ಮತ್ತು ಶಾಲಾ ಸಿಬ್ಬಂದಿ ಇದ್ದರು.




ಪ್ರತಿವರ್ಷ ಜೂನ್ ತಿಂಗಳ 5 ನೇ ತಾರೀಖಿ ನಂದು ವಿಶ್ವವ್ಯಾಪಿ "ವಿಶ್ವ ಪರಿಸರ ದಿನಾಚರಣೆ" ಯನ್ನು ಆಚರಿಸಲಾಗುತ್ತದೆ. ಪರಿಸರ ದಿನ ಆಚರಿಸುವ ಪ್ರಮುಖ ಉದ್ದೇಶವೆಂದರೆ ಜನರಲ್ಲಿ ಪರಿಸರ ಸಂರಕ್ಷಣೆಯ ಅರಿವು ಮೂಡಿಸುವುದು. ಈ ಸಂದರ್ಭದಲ್ಲಿ, ಪ್ರಪಂಚದಾದ್ಯಂತ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗುತ್ತದೆ. ಇದರಿಂದಾಗಿ ಮಾನವರು ಮತ್ತು ಪ್ರಾಣಿಗಳು ಶುದ್ಧಪರಿಸರದಲ್ಲಿ ಮುಕ್ತವಾಗಿ ಉಸಿರಾಡಬಹುದು.

ಪರಿಸರ ದಿನಾಚರಣೆಯನ್ನು ಆಚರಿಸಬೇಕೆಂಬ ನಿರ್ಧಾರವನ್ನು 1972 ರ ಸ್ಟಾಕ್ ಹೋಂ (ಸ್ವೀಡನ್ ದೇಶ) ನಲ್ಲಿ ನಡೆದ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ತೆಗೆದುಕೊಳ್ಳಲಾಯಿತು. ತದ ನಂತರ ಎರಡು ವರ್ಷಗಳ ಬಳಿಕ ಅಂದರೆ 1974 ರಿಂದ ಮೊಟ್ಟಮೊದಲನೆಯದಾಗಿ ವಿಶ್ವದಾದ್ಯಂತ ವಿಶ್ವ ಪರಿಸರ ದಿನಾಚರಣೆಯನ್ನು "ಜೀವಿಸಲು ಭೂಮಿಯೊಂದೇ" ಎಂಬ ಧ್ಯೇಯ ವಾಕ್ಯದೊಂದಿಗೆ ಪ್ರಾರಂಭವಾಯಿತು. ಈ ದಿನದಂದು, ಪರಿಸರ ಪ್ರೇಮಿಗಳೆಲ್ಲ ಪ್ರಪಂಚದಾದ್ಯಂತ ಗಿಡಗಳನ್ನು ನೆಟ್ಟು ಸಂಭ್ರಮಿಸುತ್ತಾರೆ. ನಮ್ಮ ನೆಲ, ನಾವೆಲ್ಲರೂ ವಾಸಿಸುವ ಭೂಮಿ, ಬೆಳೆಯುವ ಆಹಾರ, ಹೀಗೆ ಎಲ್ಲವೂ ಸಮೃದ್ಧಿಯಿಂದ ಉಳಿಯುವಂತಾಗಲು ಈ ದಿನವನ್ನು ಜಾಗೃತ ದಿನವೆಂದು ಆಚರಿಸಲಾಗುತ್ತಿದೆ.

ಪ್ರತೀವರ್ಷ ಪರಿಸರ ದಿನಾಚರಣೆಯನ್ನು ವಿಧ-ವಿಧವಾದ ಧ್ಯೇಯ ವಾಕ್ಯಗಳೊಂದಿಗೆ ಹಾಗು ಜಾಗತಿಕ ಅತಿಥೇಯ ದೇಶದೊಂದಿಗೆ ಆಚರಿಸುವ ಚಾಲ್ತಿಯಿದೆ.

"ಪ್ರಸ್ತುತ ವರ್ಷದ ಅತಿಥೇಯ ದೇಶವಾಗಿ ಸೌದಿ ಅರೇಬಿಯ ವನ್ನು ಆಯ್ಕೆ ಮಾಡಲಾಗಿದೆ ಹಾಗೂ "ವಿಶ್ವ ಪರಿಸರ ದಿನ"ದ ಅಭಿಯಾನವು "ನಮ್ಮಭೂಮಿ" ಎಂಬ ಘೋಷವಾಕ್ಯದಡಿಯಲ್ಲಿ ಭೂಮಿ ಪುನಃಸ್ಥಾಪನೆ, ಮರುಭೂಮೀಕರಣ ಮತ್ತು ಬರ ನಿರೋಧಕತೆ ಮೇಲೆ ಕೇಂದ್ರೀಕರಿಸುತ್ತದೆ".

ನಮ್ಮ ಹಿರಿಯರು ಉತ್ತಮ ಪರಿಸರದ ಜೊತೆಗೆ ಆರೋಗ್ಯವಂತರಾಗಿ ವರ್ಷಾನುಗಟ್ಟಲೇ ಬದುಕಿದವರು. ವಿದ್ಯಾಭ್ಯಾಸದಲ್ಲಿ ಹಿಂದಿದ್ದರೂ ಸಹ, ನಿಸರ್ಗದ ಅಭಿವೃದ್ಧಿಗಾಗಿ ಪ್ರಕೃತಿಯ ಕಾಳಜಿ ವಹಿಸಿದರು. ಆದರೆ, ಆಧುನಿಕತೆ ಬೆಳೆದಂತೆ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ಪರಿಸರದ ಕಾಳಜಿ ಕ್ಷೀಣಿಸುತ್ತಿದೆ. ಆದ್ದರಿಂದ, ಈ ದಿನದಂದು ಜನರೆಲ್ಲರನ್ನೂ ಒಟ್ಟುಗೂಡಿಸಿ ಪರಿಸರದ ಬಗ್ಗೆ ಅರಿವು ಮೂಡಿಸುವ ಕಾರ್ಯಗಳು ನಡೆಯಬೇಕು. ಪರಿಸರದ ಬಗ್ಗೆ ಜಾಗೃತಿಯನ್ನು ಮೂಡಿಸಬೇಕು.

ಪರಿಸರ ರಕ್ಷಣೆ - ನಮ್ಮೆಲ್ಲರ ಹೊಣೆ. ಪರಿಸರದ ಉಳಿವಿಗಾಗಿ ಪ್ರತಿಯೊಬ್ಬರು ಪರಿಸರ ಪ್ರೇಮಿಗಳಾಗಬೇಕು. ಇಂದಿನ ಬದಲಾದ ವಾತವರಣ ಹಾಗು ದಿನೇ- ದಿನೇ ಸಾಕಷ್ಟು ಏರಿಳಿಕೆಯಾಗುತ್ತಿರುವ ಹವಾಮಾನಕ್ಕೆ ಅನುಗುಣವಾಗಿ ಹೆಚ್ಚೆಚ್ಚು ಗಿಡ- ಮರಗಳನ್ನು ಬೆಳೆಸಿ, ಪರಿಸರವನ್ನು ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಪರಿಸರದ ಪ್ರಾಮುಖ್ಯತೆ ಏನೆಂಬುದನ್ನು ಶಾಲಾ- ಕಾಲೇಜುಗಳಿಂದಲೇ ಪ್ರಾರಂಭವಾಗಬೇಕು. ಪಠ್ಯ- ಪುಸ್ತಕಗಳಲ್ಲಿ ಪರಿಸರದ ಅಳಿವು-ಉಳಿವಿನ ಬಗೆಗೆ ಸಾಕಷ್ಟು ಮಾಹಿತಿ ನೀಡುವುದರ ಜೊತೆಜೊತೆಗೆ ಗಿಡ ನೆಡುವ- ಬೆಳೆಸುವ- ಪೋಷಿಸುವ ಕೆಲಸಗಳು ನಡೆಯುತ್ತಿರಬೇಕು. ಪ್ರಕೃತಿಯ ಜೊತೆ ಮಕ್ಕಳು ಬೆರೆಯಬೇಕು. ಆಗ ಪರಿಸರವು ತಾನಾಗಿಯೇ ಉಳಿಯುತ್ತದೆ.

**ಪರಿಸರವನ್ನು ಉಳಿಸಬಹುದಾದ ಕೆಲವು ಉತ್ತಮ ಸಲಹೆಗಳು :** ● ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

● ನಿಮ್ಮಗಳ ಮನೆಯ ಮುಂದೆ ಪ್ರತಿವರ್ಷ ಒಂದು ಸಸ್ಯವನ್ನುನೆಟ್ಟು, ಅದನ್ನುಆರೈಕೆ ಮಾಡಿ ಮತ್ತು ಅದು ಮರವಾಗುವವರೆಗೆ ಅದನ್ನು ಪೋಷಿಸಿ ಬೆಳೆಸಿ. ಅದು ವಿಷಕಾರಿ ಅನಿಲಗಳನ್ನು ಹೀರಿಕೊಳ್ಳಲು ಸಹಾಯ ಮಾಡುತ್ತದೆ.

● ನಿಮ್ಮ ಕಟ್ಟಡದಲ್ಲಿ ಮಳೆನೀರು ಕೊಯ್ಲು ವ್ಯವಸ್ಥೆ ತಂತ್ರಜ್ಞಾನವನ್ನು ಬಳಸಿ

● ಫ್ಯಾನ್, ಟ್ಯೂಬ್ಲೈಟ್, ಕೂಲರ್, ಎಸಿ, ಕಂಪ್ಯೂಟರ್ ಮುಂತಾದ ವಿದ್ಯುತ್ ಉಪಕರಣಗಳನ್ನು ನಿಮ್ಮ ಕೆಲಸ ಮುಗಿದ ಕೂಡಲೇ ಬಂದ್ ಮಾಡಬೇಕು.

**ನಮ್ಮ ಹಿರಿಯರು ಉತ್ತಮ ಪರಿಸರದ ಜೊತೆಗೆ ಆರೋಗ್ಯವಂತರಾಗಿ ವರ್ಷಾನುಗಟ್ಟಲೆ ಬದುಕಿದವರು. ವಿದ್ಯಾಭ್ಯಾಸದಲ್ಲಿ ಹಿಂದಿದ್ದರೂ ಸಹ ,ನಿಸರ್ಗದ ಅಭಿವೃದ್ಧಿಗಾಗಿ ಪ್ರಕೃತಿಯ ಕಾಳಜಿ ವಹಿಸಿದರು. ಆದರೆ, ಆಧುನಿಕತೆ ಬೆಳೆದಂತೆ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ಪರಿಸರದ ಕಾಳಜಿ ಕ್ಷೀಣಿಸುತ್ತಿದೆ. ಆದ್ದರಿಂದ , ಈ ದಿನದಂದು ಜನರೆಲ್ಲರನ್ನೂ ಒಟ್ಟುಗೂಡಿಸಿ ಪರಿಸರದ ಬಗ್ಗೆ ಅರಿವು ಮೂಡಿಸುವ ಕಾರ್ಯಗಳು ನಡೆಯಬೇಕು. ಪರಿಸರದ ಬಗ್ಗೆ ಜಾಗೃತಿಯನ್ನು ಮೂಡಿಸಬೇಕು.**

● ವಾತಾವರಣದಲ್ಲಿ ಇಂಗಾಲದ ಪ್ರಮಾಣವನ್ನು ಕಡಿಮೆ ಮಾಡಲು ಸೌರಶಕ್ತಿ ಮತ್ತು ಶುದ್ಧ ಇಂಧನವನ್ನುಬಳಸಿ.

● ನೀರು ಪೋಲಾಗದಂತೆ ನಿಯಮಿತವಾಗಿ ಬಳಸಬೇಕು. ನೀರನ್ನು ಬಳಸಿದ ನಂತರ, ತಕ್ಷಣ ನಲ್ಲಿಯನ್ನು ಬಂದ್ ಮಾಡಿ. ಬಟ್ಟೆಒಗೆದ ನಂತರ, ಆ ನೀರಿನಿಂದ ನೆಲವನ್ನುಸ್ವಚ್ಛಗೊಳಿಸಬಹುದು. ಇದರಿಂದ ಅದನ್ನು ಮರುಬಳಕೆ ಮಾಡಿದಂತಾಗುತ್ತದೆ.

● ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಿ.

● ವಾಯುಮಾಲಿನ್ಯವನ್ನು ತಡೆಯಲು ಪೆಟ್ರೋಲ್ - ಡೀಸೆಲ್ ವಾಹನಗಳ ಮೇಲಿನ ಅವಲಂಬನೆ ಕಡಿಮೆಯಾಗಬೇಕು.

● ಕೈಗಾರಿಕೆಗಳಿಂದ ಹೊರಬರುವ ರಾಸಾಯನಿಕ ತ್ಯಾಜ್ಯಗಳು ನೀರಿನ ಪಾಲಾಗದಂತೆ ಎಚ್ಚರ ವಹಿಸಿ ಜಲಮಾಲಿನ್ಯವನ್ನು ತಡೆಯಬೇಕು.

● ಅರಣ್ಯ ಸಂಪತ್ತನ್ನು ನಾಶ ಮಾಡದೆ, ಹಸಿರು ಸಸಿಗಳನ್ನು ಬೆಳೆಸಿ ಪರಿಸರವನ್ನು ಸ್ವಚ್ಛವಾಗಿಡಬಹುದು.

**ವನಮಹೋತ್ಸವ ಆಚರಣೆ:** ರಾಷ್ಟ್ರದಾದ್ಯಂತ ಪ್ರತಿಯೊಂದು ಶಾಲಾ- ಕಾಲೇಜು, ಸಂಘ ಸಂಸ್ಥೆಗಳಲ್ಲಿ ಜೂನ್ 5 ರಂದು ಗಿಡಗಳನ್ನು ನೆಡುವುದರ ಮೂಲಕ ವನ ಮಹೋತ್ಸವವನ್ನು ಆಚರಿಸುತ್ತಾರೆ. ಈ ಕಾರ್ಯವು ಕೇವಲ ಒಂದು ದಿನಕ್ಕೆ/ ತಿಂಗಳಿಗೆ ಸೀಮಿತವಾಗಿರದೇ, ವರ್ಷಪೂರ್ತಿ ಗಿಡಗಳನ್ನು ನೆಟ್ಟು ನಮ್ಮ ಪರಿಸರವನ್ನು ರಕ್ಷಿಸಿಕೊಳ್ಳಬೇಕು.

ಪ್ರತಿಯೊಬ್ಬರಿಗೂ ಮಾಲಿನ್ಯ ಮುಕ್ತ ಪರಿಸರದ ಪ್ರಾಮುಖ್ಯತೆ ಮತ್ತು ಹಾನಿಯ ನಷ್ಟವನ್ನು ಮನದಟ್ಟು ಮಾಡಿ, ಮುಂದಿನ ಪೀಳಿಗೆಗೆ ವೈಯಕ್ತಿಕ ಆಸ್ತಿ- ಅಂತಸ್ತು ಗಳನ್ನು ಮಾಡುವ ಬದಲಿಗೆ ಪರಿಶುದ್ಧ ಗಾಳಿ- ಉತ್ತಮ ಪರಿಸರವನ್ನು ಕೊಡುಗೆಯಾಗಿ ನೀಡುವ ಪಣತೊಟ್ಟು, ಪರಿಸರದ ಅಭಿವೃದ್ಧಿಯಾದರೆ "ವಿಶ್ವಪರಿಸರ ದಿನ"ಕ್ಕೆ ಮಹತ್ವ ಬಂದಂತಾಗುತ್ತದೆ.

**-ಡಾ. ಪ್ರಮೋದ್ ಜಿ.ವಿ., ಡಾ. ದೀಪಶ್ರೀ ಪ್ರಮೋದ್ ಗುಜ್ಜರ್**
ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ
ದಾವಣಗೆರೆ.

## ಬಂಜಾರ ಸೇವಾ ಸಂಘದಿಂದ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ. 7- ಬಂಜಾರ ಸೇವಾ ಸಂಘದ ವತಿಯಿಂದ 2023-24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಮಕ್ಕಳಿಗೆ 'ಪ್ರತಿಭಾ ಪುರಸ್ಕಾರ' ಹಾಗೂ ಈ ಸಾಲಿನಲ್ಲಿ ನಿವೃತ್ತಿಯಾದ ಬಂಜಾರ ನೌಕರರಿಗೆ ಸನ್ಮಾನ ಮಾಡಲಿದ್ದಾರೆ.

ಎಸ್ಸೆಸ್ಸೆಲ್ಸಿಯಲ್ಲಿ ಶೇ.85 ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ ಬಂಜಾರ ಜನಾಂಗದ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ಇದೇ ದಿನಾಂಕ 10ರೊಳಗಾಗಿ 9071280369, 9743483659 ಈ ವ್ಯಾಟ್ಸಾಪ್ ಸಂಖ್ಯೆಗೆ ಕಳುಹಿಸಬೇಕು.

# ಬಹುಮುಖ ಪ್ರತಿಭೆ ದಿ. ದ್ವಾರಕೀಶ್ ಬದುಕಿನ ಪಯಣ


ನಗರದಲ್ಲಿ ಇಂದು ದ್ವಾರಕೀಶ್ ಸ್ಮರಣೆ

ಕನ್ನಡ ಚಿತ್ರರಂಗದ ಬಹುಮುಖ ಪ್ರತಿಭೆಯ ಜನಪ್ರಿಯ ವ್ಯಕ್ತಿ, ಹಿರಿಯ ನಟ, ನಿರ್ದೇಶಕ, ನಿರ್ಮಾಪಕ, ಪ್ರಚಂಡ ಕುಳ್ಳ ಎಂದೇ ಪ್ರಖ್ಯಾತರಾದ ದ್ವಾರಕೀಶ್ ಇಹಲೋಕ ತ್ಯಜಿಸಿದ್ದು, ಕನ್ನಡ ಚಿತ್ರರಂಗಕ್ಕೆ ತುಂಬಲಾರದ ನಷ್ಟ.

ದ್ವಾರಕೀಶ್ ಅವರ ಬದುಕಿನ ಪಯಣವನ್ನು ಸಂಕ್ಷಿಪ್ತ ವಾಗಿ ಮೆಲುಕು ಹಾಕಿ ನೋಡೋಣ.

1942 ಆಗಸ್ಟ್ 19ರಂದು ಜನಿಸಿದ ಇವರು 300ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ ಅಪರೂಪದ ನಟ.

ಡಾ. ರಾಜ್‌ಕುಮಾರ್, ವಿಷ್ಣುವರ್ಧನ್, ಶಂಕರ್‌ನಾಗ್, ರಜನಿಕಾಂತ್, ಶ್ರೀನಾಥ್, ಅಂಬರೀಶ್, ಟೈಗರ್ ಪ್ರಭಾಕರ್‌ರವರಂತಹ ಮೇರು ನಟರೊಂದಿಗೆ ನಟಿಸಿದ ಮೇಧಾವಿ. ಅವರು ಹೆಸರು ಮಾಡಿದ ಚಿತ್ರಗಳೆಂದರೆ ಮೇಯರ್ ಮುತ್ತಣ್ಣ, ಕುಳ್ಳ ಏಜೆಂಟ್ 000, ಭಕ್ತ ಕುಂಬಾರ, ಭಾಗ್ಯವಂತರು, ಗುರು-ಶಿಷ್ಯರು, ಆಪ್ತಮಿತ್ರ, ದೇವರದುಡ್ಡು. ಅವರದೇ ಆದ ವಿಶಿಷ್ಟ ಶೈಲಿಯಿಂದ ಪ್ರಾರಂಭದಲ್ಲಿ ಒಬ್ಬ ಹಾಸ್ಯ ನಟರಾಗಿ, ನಟರಾಗಿ, ಪೋಷಕ ನಟರಾಗಿ ನಟಿಸಿ ಅಪಾರ ಅಭಿಮಾನಿಗಳ ಮನಸ್ಸಿನಲ್ಲಿ ಉಳಿದಿದ್ದಾರೆ.

ಹೀಗೆ 300 ಚಿತ್ರಗಳಲ್ಲಿ ನಟನೆ, 30 ಚಿತ್ರಗಳ ನಿರ್ದೇಶನ, 50 ಚಿತ್ರಗಳನ್ನು ನಿರ್ಮಾಣ, ಮಾಡಿದ್ದಾರೆ. ಚಿತ್ರರಂಗದಲ್ಲಿ ಅಪಾರ ಪ್ರೀತಿ ಹೊಂದಿದ್ದ ದ್ವಾರಕೀಶ್ ಅವರು ಸದಾ ಸಿನಿಮಾ, ಸಿನಿಮಾ, ಸಿನಿಮಾ... ಅಂತಲೇ ತಮ್ಮ ಜೀವನವನ್ನು ಚಿತ್ರರಂಗಕ್ಕೆ ಮುಡುಪಾಗಿಟ್ಟಿದ್ದ ಧೀಮಂತ ವ್ಯಕ್ತಿ.

ಸಿನಿಮಾ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಹೊಸ ಹೊಸ ಆಲೋಚನೆಗಳೊಂದಿಗೆ ಕಠಿಣ ಸಾಹಸಕ್ಕೆ ಕೈ ಹಾಕುವ ಹುಚ್ಚಿನಲ್ಲಿ ಸಿನಿಮಾಗಳನ್ನು ನಿರ್ಮಿಸುವ ಕನಸು ಹೊಂದಿದ್ದ ದ್ವಾರಕೀಶ್ ಅವರು ಅನೇಕ ಹೊಸ ಪ್ರತಿಭೆ ಹೊಂದಿ ರುವ ನಟರನ್ನು ಚಿತ್ರರಂಗಕ್ಕೆ ಪರಿಚ ಯಿಸಿ ಬೆಳೆಸಿದ್ದಾರೆ ಮತ್ತು ಮಾರ್ಗ ದರ್ಶಕರಾಗಿ ಪ್ರೋತ್ಸಾಹಿಸಿದ್ದಾರೆ.

ಸದಾ ಹುರುಪು, ಹುಮ್ಮಸ್ಸಿನಿಂದ ಇದ್ದ ಶ್ರೀ ದ್ವಾರಕೀಶ್‌ರವರು ಹೆಸರಿಗೆ ಕುಳ್ಳ ಅಷ್ಟೇ. ಆದರೆ ಚಿತ್ರರಂಗ ಕ್ಷೇತ್ರದಲ್ಲಿ ಮತ್ತು ಅನುಭವದಲ್ಲಿ ಬಹಳ ಎತ್ತರಕ್ಕೆ ಬೆಳೆದಂತಹ ಮೇಧಾವಿ. ಚಿತ್ರರಂಗದಲ್ಲಿ ಅನೇಕ ಏರು-ಇಳಿವು, ಸೋಲು-ಗೆಲುವು ಅನುಭವಿಸಿದ್ದರು. ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ಎಲ್ಲವುಗಳನ್ನು ಸಮನಾಗಿ ಎದುರಿಸಿ ಮತ್ತೆ ಗೆದ್ದೆ ಗೆಲ್ಲುತ್ತೇನೆ ಎಂಬ ಭರವಸೆ, ಆಸೆ ಮತ್ತು ನಂಬಿಕೆ ಹೊಂದಿದ ಉತ್ಸಾಹದ ಚಿಲುಮೆಯೊಂದಿಗೆ ಅದ್ಭುತ ಸಾಧನೆ ಮಾಡಿದ್ದಾರೆ.

ಇದು ಸಾಮಾನ್ಯ ಸಾಧನೆಯಲ್ಲ. ಹೀಗೆ ಸಿನಿಮಾ ಕ್ಷೇತ್ರದಲ್ಲಿ ಸಾಧನೆ ಮಾಡಿ ಎಲ್ಲರ ಮನಸ್ಸಿನಲ್ಲಿ ಮಾಸದೇ ಉಳಿದಿರುವ ಜನಪ್ರಿಯ ನಟ, ಕನ್ನಡದ ಕಣ್ಮಣಿ ದ್ವಾರಕೀಶ್‌ರವರು 1967 ಏಪ್ರಿಲ್ 26ರಂದು ಶ್ರೀಮತಿ ಅಂಬುಜಾ ಅವರನ್ನು ಮದುವೆಯಾದರು. ಇಬ್ಬರು ಪತ್ನಿಯರು ಮೊದಲ ಪತ್ನಿ ಅಂಬುಜಾ, ಎರಡನೇ ಪತ್ನಿ ಶೈಲಜಾ, ಮೊದಲ ಪತ್ನಿ ಅಂಬುಜಾ ಅವರನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು. ಇವರಿಗೆ ಒಟ್ಟು ಐದು ಜನ ಗಂಡು ಮಕ್ಕಳು. ಇವರದು ಸುಖೀ ಕುಟುಂಬ.

**- ಹೆಚ್.ವಿ. ಮಂಜುನಾಥ ಸ್ವಾಮಿ,**
**ದಾವಣಗೆರೆ. 98448 82366**

## ಅಮೆರಿಕದಲ್ಲಿ ಬೇಸಿಗೆ ಆರಂಭಕ್ಕೆ ಮೊದಲೇ ಉರಿ ಬಿಸಿಲು

ರೆನೊ, ಜೂ. 7 - ಅಮೆರಿಕದ ವಾಯುವ್ಯ ಭಾಗದಲ್ಲಿ ತಾಪಮಾನ ತೀವ್ರ ಏರಿಕೆಯಾಗಿದೆ. ಕ್ಯಾಲಿಫೋರ್ನಿಯಾದಿಂದ ಹಿಡಿದು ಅರಿಜೋನಾಗವರೆಗೆ ತಾಪಮಾನ 43 ಡಿಗ್ರಿ ಸೆಲ್ಸಿಯಸ್ ಗಡಿ ದಾಟಿದೆ.

ಅಮೆರಿಕದಲ್ಲಿ ಬೇಸಿಗೆಗಾಲದ ಆರಂಭ ಇನ್ನೂ ಎರಡು ವಾರವಿದೆ. ಅಷ್ಟರಲ್ಲೇ ಅತಿಯಾದ ತಾಪಮಾನ ಕಂಡು ಬಂದಿದೆ. ಮುಂದಿನ ದಿನಗಳಲ್ಲಿ ತಾಪಮಾನ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಅರಿಜೋನಾ ಹಾಗೂ ನೆವಾಡಾಗಳಲ್ಲಿ ಬಿಸಿ ಗಾಳಿಯ ಎಚ್ಚರಿಕೆ ನೀಡಲಾಗಿದೆ. ಲಾಸ್ ವೆಗಾಸ್‌ನಲ್ಲಿ ಬಿಸಿಗಾಳಿಯ ಎಚ್ಚರಿಕೆಯನ್ನು ಶನಿವಾರದವರೆಗೆ ಮುಂದುವರೆಸಲಾಗಿದೆ. ಫೀನಿಕ್ಸ್‌ನಲ್ಲಿ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಇದರಿಂದಾಗಿ 2016ರ 44 ಡಿಗ್ರಿ ಸೆಲ್ಸಿಯಸ್ ದಾಖಲೆ ಮುರಿದಿದೆ.

## ಪ್ರತಿಭಾ ಪುರಸ್ಕಾರಕ್ಕೆ ದೇವಾಂಗ ವಿದ್ಯಾರ್ಥಿಗಳಿಂದ ಅರ್ಜಿ

ದಾವಣಗೆರೆ, ಜೂ. 7- ದಾವಣಗೆರೆ ನಗರ ದೇವಾಂಗ ಸಂಘದ ವತಿಯಿಂದ 7 ನೇ ವರ್ಷದ ದೇವಾಂಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ (ರಾಜ್ಯ ಪಠ್ಯಕ್ರಮ) ಪರೀಕ್ಷೆಯಲ್ಲಿ ಶೇ. 90, ಸಿಬಿಎಸ್‌ಇ ಪಠ್ಯಕ್ರಮದವರು ಶೇ.75 ಅಂಕಗಳನ್ನು ಹಾಗೂ ಪಿಯುಸಿಯಲ್ಲಿ ಶೇ. 85 ರಷ್ಟು ಅಂಕ ಪಡೆದಿರುವ, ದಾವಣಗೆರೆ ನಗರದಲ್ಲಿ ವಾಸವಾಗಿರುವ ದೇವಾಂಗ ವಿದ್ಯಾರ್ಥಿಗಳು ಅರ್ಜಿಯನ್ನು ಶ್ರೀ ದೇವಾಂಗ ವಿದ್ಯಾರ್ಥಿ ನಿಲಯ, ಡಾ. ಪುರಂತರ ಆಸ್ಪತ್ರೆ ರಸ್ತೆ, ಎಂಸಿಸಿ ಎ ಬ್ಲಾಕ್ ದಾವಣಗೆರೆ ಇವರಿಗೆ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸಿ : 9449422359, 9880662036, 8971590727, 9164829666.

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ 30×60, 30×60 North ಅಕ್ಕ ಪಕ್ಕ, 30×40, 30×40 East ಅಕ್ಕ ಪಕ್ಕ, Rate = 2600-00
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 40X60 ದಕ್ಷಿಣ, 100 ಅಡಿ ರಸ್ತೆಯ ಹಿಂಭಾಗದ 40 ಅಡಿ ರಸ್ತೆಗೆ
ಮಾಲೀಕರು : 96633 35235
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**FLAT FOR SALE**
ದಾವಣಗೆರೆ ವಿದ್ಯಾನಗರ ಕೊನೆ ಬಸ್ ಸ್ಟಾಪ್ ಬಳಿ 3BHK Semi furnished ಫ್ಲಾಟ್ ಮಾರಾಟಕ್ಕಿದೆ.
ಸಂಪರ್ಕಿಸಿ: 88614 11687

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಕೆಲಸ ಮಾಡಲು ಹಗಲು ವೇಳೆ ಸೂಪರ್‌ವೈಸರ್ ಮತ್ತು ರಾತ್ರಿ ವೇಳೆಯಲ್ಲಿ ಸೂಪರ್‌ವೈಸರ್ ಮತ್ತು ರೂಂ ಬಾಯ್ ಬೇಕಾಗಿದ್ದಾರೆ.
63639 54459

**ಬೇಕಾಗಿದ್ದಾರೆ**
ACE TRACTOR SHOWROOM ನಲ್ಲಿ ಕೆಲಸ ಮಾಡಲು ಅಕೌಂಟೆಂಟ್ (ಮಹಿಳೆಯರು) ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ನೀಡಲಾಗುವುದು. ಟ್ಯಾಲಿ ಆಗಿರುವ ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
9916955111, 9448202030

**ಸೈಟುಗಳು ಮಾರಾಟಕ್ಕಿವೆ**
ಬನಂಶಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**2 ಎಕರೆ 10 ಗುಂಟೆ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 15 ಕಿ.ಮೀ. (ಬನ್ನಿಕೋಡು) 65 ಲಕ್ಷ (ಎಕರೆ)
95353 01995

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್, 9ನೇ ಮೇನ್, 2ನೇ ಕ್ರಾಸ್‌ನಲ್ಲಿ ಫಸ್ಟ್ ಫ್ಲೋರ್‌ನಲ್ಲಿ ಮನೆ ಬಾಡಿಗೆಗೆ ಇದೆ.
99726 75765

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, 40x60 West, 30x50 West Rate = 2550-00
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**WANTED DRIVER FOR EECO VAN**
CONTACT :
91486 81600

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ರಿಯಾಯಿತಿ ದರದಲ್ಲಿ ಮಾರಾಟಕ್ಕಿವೆ. 30×40, 30×50, 40×60
98441 24217
98458 61220

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳ ಸೇಲ್ಸ್ ಮ್ಯಾನ್ ಮತ್ತು ಸೇಲ್ಸ್ ಗರ್ಲ್ ಬೇಕಾಗಿದ್ದಾರೆ. ಸಂಪರ್ಕಿಸಿ:
ಶಿಲ್ಪಕಲಾ ಸಿಲ್ಕ್ ಸಾರೀಸ್
ಚಾಮರಾಜಪೇಟೆ, ದಾವಣಗೆರೆ
7892628916

**CCTV ಫಿಟ್ಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಶಿಕ್ಷಣ ಅರ್ಹತೆ ಇರುವುದಿಲ್ಲ ಅನುಭವ ಮುಖ್ಯ, ಉತ್ತಮವಾದ ಸಂಬಳ ಕೊಡಲಾಗುವುದು.
70195 12416

**ಹೋಟೆಲ್ ಬಾಡಿಗೆಗಿದೆ**
15x90 ಅಳತೆಯ ಎಲ್ಲಾ ಸೌಕರ್ಯವುಳ್ಳ, ಬೋರ್ ವೆಲ್, ಮುನ್ಸಿಪಲ್ ನೀರಿನ ಸೌಲಭ್ಯ ಹಾಗೂ ಸಾಮಾನುಗಳ ಸಮೇತ ಬಾಡಿಗೆಗೆ ಇದೆ. (ಸಸ್ಯಹಾರಿ ಹಾಗೂ ಮಾಂಸಾಹಾರಿಗೆ ಅನುಕೂಲವಿದೆ)
93417 10083

**ಸೈಟುಗಳು ಮಾರಾಟಕ್ಕಿವೆ**
ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆಹೆಚ್‌ಬಿ ಪಕ್ಕದ 30X40 ಅಳತೆಯ 6 ಸೈಟುಗಳು ದೂಡಾ ಅನುಮೋದನೆ, ನಗರಸಭಾ ಡೋರ್ ನಂಬರ್, ಬ್ಯಾಂಕ್ ಸಾಲ ಸೌಲಭ್ಯವಿರುವ ಸೈಟುಗಳು ನೇರ ಮಾರಾಟಕ್ಕಿವೆ.
98809 33630

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆ ಬಿ ಬ್ಲಾಕ್‌ನಲ್ಲಿ 30×50 ಪೂರ್ವ, 30×40 ಪೂರ್ವ, ಬೈಪಾಸ್ ಸರ್ವಿಸ್ ರಸ್ತೆಗೆ 30×55 ದಕ್ಷಿಣ (ಕಮರ್ಷಿಯಲ್) ವಿನಾಯಕ ಬಡಾವಣೆಯಲ್ಲಿ 30×50 ಪೂರ್ವ, ದಕ್ಷಿಣ ಕಾರ್ನರ್ ಸೈಟುಗಳು ಮಾರಾಟಕ್ಕೆ ಇವೆ. ಹೊಸ ಕುಂದುವಾಡದಲ್ಲಿ ರೋಹನ್ ಗಾರ್ಡನ್‌ನಲ್ಲಿ 3 ಸೈಟ್ ಉತ್ತರ 30×5 ಇವೆ. ಸಂಪರ್ಕಿಸಿ ಸುರೇಶ್ ಆರ್.ಎಸ್. ಶಾಮನೂರು (ಪ್ರಾಪರ್ಟಿ ಅಡ್ವೈಸರ್)
ಮೊ. : 8431400907

**ಸರ್ಕಾರಿ ನೌಕರಿಯಲ್ಲಿರುವ**
ನೌಕರರಿಗೆ ಶೇಕಡಾ 2%ರಂತೆ 3 ಲಕ್ಷ ಹಣ ಬೇಕಾಗಿರುತ್ತದೆ. ಹಣ ಕೊಡುವವರು ಸಂಪರ್ಕಿಸಿ. ಭದ್ರತೆಗಾಗಿ ಬಾಂಡ್ ಪೇಪರ್, ಚೆಕ್ ನೀಡಲಾಗುತ್ತಿದೆ.
9591820888

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಸುಬ್ರಮಣ್ಯ ನಗರದಲ್ಲಿ ಮನೆಗಳು ಬಾಡಿಗೆಗೆ ಇವೆ**
ಡಬಲ್ ಬೆಡ್ ರೂಂ. ಹೈಟೆಕ್ ಆಸ್ಪತ್ರೆ ಹತ್ತಿರ, ಸರ್ವೀಸ್ ರೋಡ್ ಸಮೀಪ ಕಡಿಮೆ ಬೆಲೆಗೆ ಸೈಟುಗಳು ಮಾರಾಟಕ್ಕೆ ಇವೆ. ಉತ್ತರ ಮುಖ 15×40=600 ಅಡಿ, 7,75000-00 (ಏಳು ಲಕ್ಷದ ಎಪ್ಪತ್ತೈದು ಸಾವಿರ) ಕೆಂಪು ಮಣ್ಣು. ಸಂಪರ್ಕಿಸಿ
80505 91277

**ಬೇಕಾಗಿದ್ದಾರೆ**
ಪಿಯುಸಿ ಪಾಸ್ ಆದ 25 ವರ್ಷದೊಳಗಿನ ಯುವಕ/ಯುವತಿಯರು ದಾವಣಗೆರೆ ನ್ಯೂರೋಥೆರಪಿ ಕೇಂದ್ರದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಆಸಕ್ತರು ಇಂದೇ ಸಂಪರ್ಕಿಸಿ :
99726 00713

**ಹುಡುಗರು ಬೇಕಾಗಿದ್ದಾರೆ**
ಶ್ರೀ ಮಂಜುನಾಥ ಟ್ರ್ಯಾಕ್ಟರ್ಸ್
ಸೋನಾಲಿಕಾ ಟ್ರ್ಯಾಕ್ಟರ್ ಬಿಡಿ ಭಾಗಗಳ ಅಧಿಕೃತ ಮಾರಾಟಗಾರರು
ಇವರಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ದಾವಣಗೆರೆ.
99729 74626

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಬೇಕಾಗಿದ್ದಾರೆ**
ಸೇಲ್ಸ್ / ಮಾರ್ಕೆಟಿಂಗ್ - 04
ಡಿಲೆವರಿ ಬಾಯ್ಸ್ - 03
ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ :
ವಿಶ್ವಾಸ್ ಸೈಂಟಿಫಿಕ್ ಕಂ.
ಹದಡಿ ರಸ್ತೆ, ದಾವಣಗೆರೆ.
ಮೊ : 99000 96349

**ಇಂಡಸ್ಟ್ರಿ ಮಾರಾಟಕ್ಕೆ**
ಹನಗವಾಡಿ ಇಂಡಸ್ಟ್ರೀಯಲ್ ಏರಿಯಾದಲ್ಲಿ 110x100 ಅಳತೆಯ ಹೋಂ ಇಂಡಸ್ಟ್ರೀಸ್ 31x55 ಬೋರ್ ವೆಲ್ ಸೌಕರ್ಯವಿದೆ, 10HP ಕರೆಂಟ್ ಇರುವ RCC ಬಿಲ್ಡಿಂಗ್ ಮಾರಾಟಕ್ಕೆ ಇದೆ.
98445 46777

**ಬೇಕಾಗಿದ್ದಾರೆ**
ಕ್ರೆಡಿಟ್ ಕೋ-ಆಪ್ ಸೊಸೈಟಿಯಲ್ಲಿ ಸಹಾಯಕ ಹುದ್ದೆಗೆ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಬಿ.ಕಾಂ. ಅಥವಾ ತತ್ಸಮಾನ ಪದವಿ ಪಡೆದಿರಬೇಕು.
95908 07050

**ಜೀನಿಯಸ್ ರೆಡ್ಡಿ ನರ್ಸರಿ ಸ್ಕೂಲ್ ಹರಿಹರ**
LKG, PG, UKG
ಫೀಜ್ : 10,000 ಮಾತ್ರ. ಸಂಪರ್ಕಿಸಿ :
93802 29199

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೋರೇಷನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505/9449805750

**ಶಿಕ್ಷಕಿಯರು ಬೇಕಾಗಿದ್ದಾರೆ**
ಅನುಭವವುಳ್ಳ ಶಿಕ್ಷಕಿಯರು ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ :
Smart Kids Public School. Contact :
81977 50922
89703 66639

**TEAM-ONE INDIA**
ಆರೋಗ್ಯ ಸಮಸ್ಯೆಗಳ ಪರಿಹಾರಕ್ಕಾಗಿ "ಅರೋಗ್ಯದಲ್ಲೇ ಜೀವನ ಅಭಿಯಾನ" ಮಾಹಿತಿಗಾಗಿ
94834 76846
ಕರೆ ಮಾಡಿ

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
2 KG ಪಾಕೆಟ್ ಸಸಿಗಳು - 1 ವರ್ಷ
2 KG ಪಾಕೆಟ್ ಸಸಿಗಳು - 2 ವರ್ಷ
ಈ ಕೆಳಕಂಡ ಮೊಬೈಲ್‌ಗೆ ಸಂಪರ್ಕಿಸಿ :
99809 32863, 81970 08194

**TO LET - RENT ONLY**
2 BHK - North facing, Second floor. Swami Vivekananda Badavane,7th Main,Davangere. Western & Indian toilet.
Rent Only, No lease.Ready to move.
94482 01483

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಸಿಗುತ್ತವೆ**
ಸಂಪರ್ಕಿಸಿ :
77952 48272
97318 46014

**ಸೈಟ್ ಮಾರಾಟಕ್ಕಿದೆ**
40x60 ಅಳತೆಯ ಸೈಟ್ ನಂ. 2291-HIG-1, ಕರ್ನಾಟಕ ಗೃಹ ಮಂಡಳಿ, ತುಂಗಭದ್ರಾ ಬಡಾವಣೆ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
94814 17793

**ಸ್ಪೋಕನ್ ಇಂಗ್ಲಿಷ್ & ಕಂಪ್ಯೂಟರ್ ಅಕಾಡೆಮಿ**
33 ದಿನಗಳಲ್ಲಿ ಕಲಿಯಿರಿ
ವಿಕಾಸ್ ಅಕಾಡೆಮಿ, ದಾವಣಗೆರೆ.
ಸಂಪರ್ಕಿಸಿ :
93802 29199

**ಬೇಕಾಗಿದ್ದಾರೆ**
ಸಿಲಿಂಡರ್ ಡೆಲಿವರಿ ಬಾಯ್ಸ್ ಕಂ ಆಟೋ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
98442-73736

**ವಧು ಬೇಕಾಗಿದ್ದಾರೆ**
ಫೈನಾನ್ಸ್ / ಕಿರಾಣಿ ಮರ್ಚೆಂಟ್ 44 ವರ್ಷ ವಯಸ್ಸಿನ ವರನಿಗೆ ಎರಡನೇ ಮದುವೆಗೆ ವಧು (ವಿಚ್ಛೇದಿತೆ-ವಿಧವೆ) ಬೇಕಾಗಿದ್ದಾರೆ.
89047 54519

**ಬೇಕಾಗಿದ್ದಾರೆ**
ಕಾಫಿ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ.
94482 72734

**ಅಡುಗೆ : ಮಹಿಳೆ ಬೇಕು**
ಪ್ರತಿದಿನ ಬೆಳಿಗ್ಗೆ 8.30ರಿಂದ ಸಂಜೆ 5.30ರವರೆಗೆ ಮನೆಯಲ್ಲಿ ಸಸ್ಯಹಾರಿ ಅಡುಗೆ ಮತ್ತು ಇತರೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
98442-94446

**BUILT TO SUIT**
3600 Sft Open site North- East- West Corner suitable for Day- care, Pre-School, LKG, UKG available at SS Layout, 'B' Block, 4th Main, 9th Cross, Jain Trinity College Road, Davanagere-577006 will be built to suit. Offers invited:
RAVINDRA
98440 74721/ 91089 28988.

**ಮನೆ ಬಾಡಿಗೆಗೆ ಇದೆ**
ನಗರದ ಶಾಮನೂರು ರಸ್ತೆ ಎಸ್.ಎಸ್. ಮಾಲ್ ಎದುರುಗಡೆ ಕುವೆಂಪು ನಗರ ಎಂ.ಸಿ.ಸಿ 'ಬಿ' ಬ್ಲಾಕ್, ಡೋರ್ ನಂ. 3993/43 ಮೊದಲನೇ ಮಹಡಿ ವಿಲಾಸದಲ್ಲಿ ಮೂರು ಬೆಡ್ ರೂಮ್, ಕಾರ್ಪೋರೇಷನ್ ವಾಟರ್, ಬೋರ್ ವಾಟರ್, ಸೋಲಾರ್ ನೀರು ಇರುವ ಮನೆ ಬಾಡಿಗೆಗೆ ಇದೆ. ಆಸಕ್ತರು ಈ ಕೆಳಕಂಡ ಫೋನ್ ನಂಬರ್‌ಗಳಿಗೆ ನೇರವಾಗಿ ಸಂಪರ್ಕಿಸಲು ಕೋರಿದೆ. (ಬ್ರೋಕರ್‌ಗಳಿಗೆ ಅವಕಾಶವಿರುವುದಿಲ್ಲ)
95915 47906
94495 25493

**ಬೇಕಾಗಿದ್ದಾರೆ**
ಬಿ.ಎಸ್ಸಿ, ಬಿ.ಇಡಿ (PCM) - 2
ಸಂಪರ್ಕಿಸಿ :
ಮಾನಸ ಗಂಗೋತ್ರಿ ಆಂಗ್ಲ ಮಾಧ್ಯಮ ಹೈಯರ್ ಪ್ರೈಮರಿ ಸ್ಕೂಲ್, ಮಾಯಕೊಂಡ
99017-68096, 89717-04280

**WANTED TEACHER FOR HOME TUITION**
ICSE 5ನೇ ತರಗತಿ ವಿದ್ಯಾರ್ಥಿಗೆ ಮನೆಗೇ ಬಂದು ಪಾಠ ಮಾಡಲು ಅನುಭವಿ ಶಿಕ್ಷಕರು ಬೇಕಾಗಿದ್ದಾರೆ. ಸ್ಥಳ : ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್. ಸಮಯ : ಸಂಜೆ 6 ರಿಂದ 9 ರವರೆಗೆ. ಸಂಪರ್ಕಿಸಿ :
70223 03795

**ಗೋಡೌನ್ ಬಾಡಿಗೆಗೆ ಇದೆ**
5000 Sq,ft. 40 HP ಕರೆಂಟ್ ಬಂಬೂ ಬಜಾರ್ ರೋಡ್, ಹೆಚ್.ಪಿ. ಪೆಟ್ರೋಲ್ ಬಂಕ್ ಹತ್ತಿರ.
81477 53622

**ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಶಾಲೆ, ಎಲೆಬೇತೂರು**
**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
B.Sc., B.Ed. 01. ಪ್ರಾಥಮಿಕ ಶಾಲಾ ವಿಭಾಗಕ್ಕೆ
B.A., B.Ed (English) 01 ಪ್ರೌಢಶಾಲಾ ವಿಭಾಗಕ್ಕೆ
82771 70966
91648 67594

**NEET, K-CET Long Term**
ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಅಕಾಡೆಮಿ
96202 62361

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು
QUALIFICATION : SSLC TO DEGREE
5000 K TO 12,000 K + INCENTIVES
ಸ್ಥಳ : K.R. MARKET, DAVANGERE.
95350 51589, 78670 75786

**ಸೈಟ್, ಮನೆ ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಮನೆ 30x50, (2400 sqft) ಪಶ್ಚಿಮ, ಡಾಲರ್ಸ್ ಕಾಲೋನಿ ಸೈಟ್ 40x51, ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

**ಬೇಕಾಗಿದ್ದಾರೆ**
ರೆಸ್ಟೋರೆಂಟ್‌ನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಮತ್ತು ಪಾತ್ರೆ ತೊಳೆಯಲು ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ:
72596 60786

**TO - LET**
Furnished Flat for Sale and lease
2 BHK, Sqft : 1325
3 BHK, Sqft : 1888
Vidyanagar Last City Bus Stop
AM Apartment
Nainika Prime Rose
89519 38228, 91486 79995

**ಬೇಕಾಗಿದ್ದಾರೆ**
ಕಾರ್ ಮತ್ತು ಬೈಕ್ ವಾಟರ್ ವಾಶ್ ಮಾಡಲು ಹುಡುಗರು ಬೇಕಾಗಿದ್ದಾರೆ.
88673 22545
73491 94155
88673 22645

**IMMEDIATELY REQUIRED**
Computer Teacher for
DRR SCHOOL
P. B.Road Davangere.
9886217745 / 9844007624

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**CHANGE OF NAME**
I **Basavaraj Avanti S/o Amaranna Avanti,** 55 Years Resident @ 733 Amareshwara Nilaya, 2nd Main, 7th Cross, Davangere. In my passport my name is mentioned as **Basavaraj Awanti S/o Amaranna Awanti.** That i have changed my name before the B. Lingaraj Notary Public Davangere as **Basavaraj Avanti S/o Amaranna Avanti.** In future all my transaction and dealings/signing will be in my new name as **Basavaraj Avanti S/o Amaranna Avanti**

**NAME CLARIFICATION**
I **S.P. Manjunath S/o Shekrappa,** 47 Years resident @ # 62, EWS Quatras, Devaraj Urs, Davangere. In my Aadhar Card, Bank of India Bank Account and Pan Card my name is mentioned as **S.P. Manjunath.** In my school Documents my name is mentioned as **Manjappa S.P.** Above said two names are me only none else. Sworn before Notary Public on 23.02.2024. In future I will be using and dealing my name as **S.P. Manjunath.**
Sd/- **S.P. Manjunath**

**WANTED**
Tally Experienced lady Accountant / Receptionist wanted with good salary. ITI / Diploma electrical candidates & 10th / PUC office boy wanted
98867 09334, 99646 40494

**ಬಾಡಿಗೆಗೆ**
ರೆಡಿ ಡಾಬಾ
ಸಂಪರ್ಕಿಸಿ :
90080 60660

**ಶ್ರೀ ಗುರು ಬಕ್ಕೇಶ್ವರ ಚಿಟ್ಸ್ ಫಂಡ್ (ರಿ.)**
**ಹೊಸ ಚೀಟಿಯ ಪ್ರಾರಂಭ**
**ಒಂದು ಲಕ್ಷದ ಚೀಟಿ**
20 ಸದಸ್ಯರು, 20 ತಿಂಗಳು, ರೂ. 3,500/- ರೂಪಾಯಿಂದ 5,000/-ರೂ.ವರೆಗೆ
**ಎರಡು ಲಕ್ಷದ ಚೀಟಿ**
20 ಸದಸ್ಯರು, 20 ತಿಂಗಳು, ರೂ. 7,000/- ರೂಪಾಯಿಂದ 10,000/-ರೂ.ವರೆಗೆ
**5 ಲಕ್ಷದ ಚೀಟಿ**
20 ಸದಸ್ಯರು, 20 ತಿಂಗಳು, ರೂ. 17,500/- ರೂ.ನಿಂದ 25,000/- ರೂ.ಗಳು ಮಾತ್ರ.
97383 65782, 74834 97996

**ಶಿಕ್ಷಕಿಯರು ಬೇಕಾಗಿದ್ದಾರೆ**
B.Ed, D.Ed ಅಥವಾ ಯಾವುದೇ ಪದವಿ ಆಗಿರುವ ಶಿಕ್ಷಕಿಯರು ತಕ್ಷಣ ಬೇಕಾಗಿದ್ದಾರೆ. ಉಚಿತ ಬಸ್ ಸೌಲಭ್ಯವಿರುತ್ತದೆ. ಆಸಕ್ತರು ಸಂಪರ್ಕಿಸಿ : CM ವಿಜಯಕುಮಾರ್ ಕಾರ್ಯದರ್ಶಿಗಳು, ಶ್ರೀ ಶ್ರೀನಿವಾಸ ವಿದ್ಯಾಸಂಸ್ಥೆ (ರಿ.) ಬಸಾಪುರ, ದಾವಣಗೆರೆ.
ಮೊ : 99453 24288

**ಬ್ರಾಹ್ಮಣ ಲಿಂಗಾಯತ ವರ ಬೇಕಾಗಿದೆ**
ಬ್ರಾಹ್ಮಣ ವಧು, ವಯಸ್ಸು 27, SSLC ಕಲಿತಿರುವ / ವಯಸ್ಸು 29, PUC / ವಯಸ್ಸು 33, SSLC / ವಯಸ್ಸು 40, PUC ಕಲಿತಿರುವ ವಧುವಿಗೆ ವರ ಬೇಕಾಗಿದೆ. (ಕೃಷಿಕರು, ಪುರೋಹಿತರು, ಅಡುಗೆಯವರು ಇನ್ನಿತರೆ ಉದ್ಯೋಗದಲ್ಲಿರುವ ಆದಾಯವಿರುವ ಸದ್ಗುಣವಂತ ವರ ಸಂಪರ್ಕಿಸಬಹುದು) ವಧು ವರಾನ್ವೇಷಣ ಕೇಂದ್ರ, ಕಂದಾವರ, ಮಂಗಳೂರು.
98806 85177

**ಕೆಲಸಕ್ಕೆ ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ ಕಂ ರಿಸೆಪ್ಷನಿಸ್ಟ್ (ಮಹಿಳೆ)-2
ವಿದ್ಯಾರ್ಹತೆ : ಪಿಯುಸಿ.
ಟೈಲರಿಂಗ್ ಅನುಭವವುಳ್ಳವರಿಗೆ ಆದ್ಯತೆ
ಟೆಕ್ನಿಕಲ್ ಅಸಿಸ್ಟೆಂಟ್ (ಪುರುಷ)-1
ವಿದ್ಯಾರ್ಹತೆ : ಪಿಯುಸಿ.
ದ್ವಿಚಕ್ರ ವಾಹನವುಳ್ಳವರಿಗೆ ಆದ್ಯತೆ.
ಮಾಸಿಕ ವೇತನ : 8000-10000/-
95915 01592

# ನೀಟ್ ಅವ್ಯವಹಾರ: ಸುಪ್ರೀಂ ಉಸ್ತುವಾರಿಯಲ್ಲಿ ತನಿಖೆಗೆ ಆಗ್ರಹ




ನವದೆಹಲಿ, ಜೂ. 7 – ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ನಡೆಸುವ ನೀಟ್ ಪರೀಕ್ಷೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸುಪ್ರೀಂ ಕೋರ್ಟ್ ಉಸ್ತುವಾರಿಯಲ್ಲಿ ತನಿಖೆ ನಡೆಸುವಂತೆ ಕಾಂಗ್ರೆಸ್ ಆಗ್ರಹಿಸಿದೆ.

ನೀಟ್ ಪ್ರಶ್ನೆಪತ್ರಿಕೆಗಳ ಸೋರಿಕೆಯಾಗಿದೆ. ರಿಗ್ಗಿಂಗ್ ಹಾಗೂ ಭ್ರಷ್ಟಾಚಾರ ಹಲವಾರು ಪರೀಕ್ಷೆಗಳ ಭಾಗದಂತಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಿಡಿ ಕಾರಿದ್ದಾರೆ.

ಮೋದಿ ಸರ್ಕಾರ ಇದಕ್ಕೆ ನೇರ ಹೊಣೆ. ಪರೀಕ್ಷೆಯಲ್ಲಿ ಭಾಗಿಯಾದ ಹಲವರ ವಿರುದ್ಧ ಅವ್ಯವಹಾರದ ಆರೋಪಗಳಿವೆ. ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಭವಿಷ್ಯದ ಪೀಳಿಗೆ ಜೊತೆ ಚಲ್ಲಾಟವಾಡಲಾಗುತ್ತಿದೆ. ದೇಶದ ಯುವಜನರಿಗೆ ಬಿಜೆಪಿ ವಂಚಿಸಿದೆ ಎಂದು ಖರ್ಗೆ ಆಕ್ರೋಶ ಹೊರ ಹಾಕಿದ್ದಾರೆ.

ನೀಟ್ ಹಗರಣದಿಂದಾಗಿ ಲಕ್ಷಾಂತರ ಅಭ್ಯರ್ಥಿಗಳಿಗೆ ತೊಂದರೆಯಾಗಿದೆ. ಇದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗದು ಹಾಗೂ ಕ್ಷಮಿಸಲಾಗದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಜೊತೆ ಜೂಜಾಟ ನಡೆಸಲಾಗಿದೆ. ತಕ್ಷಣವೇ ಈ ಬಗ್ಗೆ ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದವರು ಆಗ್ರಹಿಸಿದ್ದಾರೆ.

ಈ ವರ್ಷ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಸುದ್ದಿಯನ್ನು ಹತ್ತಿಕ್ಕಲಾಯಿತು. ಹಲವಾರು ವಿದ್ಯಾರ್ಥಿಗಳ ಅಂಕಗಳನ್ನು ಹೆಚ್ಚಿಸಲಾಗಿದೆ. ದಾಖಲೆಯ 67 ವಿದ್ಯಾರ್ಥಿಗಳು ಮೊದಲ ಸ್ಥಾನ ಪಡೆದಿದ್ದಾರೆ. ಈ ಪೈಕಿ ಆರು ವಿದ್ಯಾರ್ಥಿಗಳು ಒಂದೇ ಕೇಂದ್ರದವರು ಎಂದೂ ಅವರು ಹೇಳಿದ್ದಾರೆ.

ನೀಟ್ ಪರೀಕ್ಷೆ ನಡೆಸುವ ಎನ್.ಟಿ.ಎ. ಈ ಆರೋಪಗಳ ಬಗ್ಗೆ ಸ್ಪಷ್ಟನೆ ನೀಡಿದೆ. ಆದರೆ, ವಿದ್ಯಾರ್ಥಿಗಳು ಈ ಸ್ಪಷ್ಟನೆ ನಂಬಿಕಾರ್ಹವಲ್ಲ ಎನ್ನುತ್ತಿದ್ದಾರೆ. ಪರೀಕ್ಷೆಯ ಪಾವಿತ್ರ್ಯತೆ ಬಗ್ಗೆ ನಂಬಿಕೆ ಉಳಿಸಿಕೊಳ್ಳಬೇಕಿದೆ ಎಂದೂ ಅವರು ಹೇಳಿದ್ದಾರೆ.

# ಜಿಲ್ಲೆಯಲ್ಲಿ ಇದುವರೆಗೆ ಆಗದ ಅಭಿವೃದ್ಧಿ ಕಾರ್ಯಗಳು ಮುಂದಿನ ದಿನಗಳಲ್ಲಿ ಆಗಲಿವೆ

## ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲುವು: ಕಾಂಗ್ರೆಸ್ ಪಾಲಿಕೆ ಸದಸ್ಯರ ಸಂಭ್ರಮಾಚರಣೆ



ದಾವಣಗೆರೆ, ಜೂ.7 - ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆಯ ಮುಂಭಾಗ ಪಾಲಿಕೆಯ ಕಾಂಗ್ರೆಸ್ ಸದಸ್ಯರು ಶುಕ್ರವಾರ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ವೇಳೆ ಮಾತನಾಡಿದ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಜಿಲ್ಲೆಯಲ್ಲಿ ಇದುವರೆಗೆ ಆಗದ ಅಭಿವೃದ್ಧಿ ಕಾರ್ಯಗಳು ಮುಂದಿನ ದಿನಗಳಲ್ಲಿ ಆಗಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹಾಗೂ ನೂತನ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ದಾವಣಗೆರೆಯನ್ನು ಸಿಂಗಾಪುರ ಆಗಿಸುವ ಪಣ ತೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಕಾರ್ಯನಿರ್ವಹಿಸಲಿದ್ದು, ಅಭಿವೃದ್ಧಿ ಪರ್ವವೇ ಹರಿದು ಬರಲಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಕಳೆದ 25 ವರ್ಷಗಳಿಂದಲೂ ಲೋಕಸಭಾ ಸದಸ್ಯರಾಗಿದ್ದವರು ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ. ಈಗ ಕಾಂಗ್ರೆಸ್ ನ ಪ್ರಭಾ ಮಲ್ಲಿಕಾರ್ಜುನ್ ಅವರ ಮೇಲೆ ಸಾಕಷ್ಟು ನಿರೀಕ್ಷೆ ಇದ್ದು, ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ನಿರ್ವಹಿಸಲಿದ್ದಾರೆ. ದಾವಣಗೆರೆ ಉತ್ತರ.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿಯೂ ಕಾಂಗ್ರೆಸ್ ಶಾಸಕರಿದ್ದು, ಜಿಲ್ಲಾ ಉಸ್ತುವಾರಿ ಸಚಿವರೂ ಇದ್ದಾರೆ. ಹಾಗಾಗಿ ಅಭಿವೃದ್ಧಿ ಕಾರ್ಯಗಳಿಗೆ ವೇಗ ಸಿಗಲಿದೆ ಎಂದು ತಿಳಿಸಿದರು.

ಸಂಭ್ರಮಾಚರಣೆ ವೇಳೆ ಪಾಲಿಕೆ ಮೇಯರ್ ವಿನಾಯಕ್ ಪೈಲ್ವಾನ್, ಕಾಂಗ್ರೆಸ್ ಪಾಲಿಕೆಯ ಸದಸ್ಯರಾದ ಅಬ್ದುಲ್ ಲತೀಫ್, ಕೆ. ಚಮನ್ ಸಾಬ್, ಸವಿತಾ ಹುಲ್ಲುಮನಿ ಗಣೇಶ್, ಮೀನಾಕ್ಷಿ ಜಗದೀಶ್, ಕಾಂಗ್ರೆಸ್ ಮುಖಂಡರಾದ ಹುಲ್ಲುಮನಿ ಗಣೇಶ್, ಜಗದೀಶ್, ಗೋಪಿನಾಯ್ಕ ಮತ್ತಿತರರು ಪಾಲ್ಗೊಂಡಿದ್ದರು.

## ವಿದ್ಯಾನಗರ ಇನ್ನರ್‌ವ್ಹೀಲ್ ಸಂಸ್ಥೆಯಿಂದ ಹಿಮೋಫಿಲಿಯ ಸೊಸೈಟಿಗೆ ಫ್ರಿಡ್ಜ್ ಕೊಡುಗೆ



ದಾವಣಗೆರೆ, ಜೂ. 7- ವಿದ್ಯಾನಗರ ಇನ್ನರ್‌ವ್ಹೀಲ್ ಸಂಸ್ಥೆಯಿಂದ ನಿಜಲಿಂಗಪ್ಪ ಬಡಾವಣೆಯ ಹಿಮೋಫಿಲಿಯ ಸೊಸೈಟಿಗೆ ಫ್ರಿಡ್ಜ್ ಅನ್ನು ಕೊಡುಗೆಯಾಗಿ ನೀಡಲಾಯಿತು.

ಜೊತೆಗೆ ಸೊಸೈಟಿಯ ಏಳಿಗೆಗಾಗಿ ದುಡಿದ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಹುಟ್ಟುಹಬ್ಬ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆ ಅಧ್ಯಕ್ಷರಾದ ಮಂಜುಳಾ ಕರ್ಜಗಿ ಮತ್ತು ಕಾರ್ಯದರ್ಶಿ ಪ್ರೇಮಾ ಮಹೇಶ್ವರಪ್ಪ, ಚಾರ್ಟರ್ಡ್ ಪ್ರೆಸಿಡೆಂಟ್ ಸುಲೋಚನಾ ರಾಜಶೇಖರ್ ಮಾಗನೂರು, ಹಿಮೊಫಿಲಿಯಾ ಸೊಸೈಟಿ ಗೌರವ ಅಧ್ಯಕ್ಷರಾದ ಕಿರುವಾಡಿ ಗಿರಿಜಮ್ಮ, ಸೊಸೈಟಿ ನಿರ್ದೇಶಕ ಡಾ. ಬಿ.ಟಿ. ಅಚ್ಯುತ್, ಡಾ. ಜಿ.ಸಿ. ಸದಾಶಿವಪ್ಪ ಮತ್ತು ಇತರರು ಉಪಸ್ಥಿತರಿದ್ದರು.

## ನಗರಕ್ಕೆ ಜಿಲ್ಲಾ ಲಯನ್ಸ್ ರಾಜ್ಯಪಾಲ ಡಾ. ನೇರಿ ಕಾರ್ನೇಲಿಯೊ ಭೇಟಿ



ಜಿಲ್ಲಾ ಲಯನ್ಸ್ ರಾಜ್ಯಪಾಲ ಡಾ. ನೇರಿ ಕಾರ್ನೇಲಿಯೊ ಅವರು ಇಂದು ನಗರಕ್ಕೆ ಆಗಮಿಸಲಿದ್ದು, ದಾವಣಗೆರೆ ಲಯನ್ಸ್ ಕ್ಲಬ್ ವತಿಯಿಂದ ಏರ್ಪಾಡಾಗಿರುವ ಸಾಮಾಜಿಕ ಸೇವಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವರಲ್ಲದೇ, ಲಯನ್ಸ್ ಕ್ಲಬ್‌ಗೆ ಅಧಿಕೃತ ಭೇಟಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಬೆಳಿಗ್ಗೆ 8.30 ರಿಂದ ಆರಂಭಗೊಳ್ಳುವ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವರು, ಮಧ್ಯಾಹ್ನ 12 ಗಂಟೆಗೆ ಲಯನ್ಸ್ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗವಹಿಸುವರು. ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷ ನೀಲಿ ಉಮೇಶ್ ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್, ಪ್ರಾಂತೀಯ ಅಧ್ಯಕ್ಷ ಎಸ್. ಓಂಕಾರಪ್ಪ, ವಲಯ ಅಧ್ಯಕ್ಷ ಎನ್.ಆರ್. ನಾಗಭೂಷಣರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

## ಮೇ ತಿಂಗಳಲ್ಲಿ ಹಳೆಯ ದಾಖಲೆ ಮೀರಿ 1.5 ಡಿಗ್ರಿ ಹೆಚ್ಚಿನ ತಾಪಮಾನ

ನವದೆಹಲಿ ಜೂ. 7 – ಕಳೆದ ಮೇ ತಿಂಗಳಲ್ಲಿ ಕಂಡು ಬಂದ ಬಿಸಿ ಗಾಳಿಯ ತೀವ್ರತೆ, ಹಳೆಯ ದಾಖಲೆಗಿಂತ ಸುಮಾರು 1.5 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ ಎಂದು ಅಧ್ಯಯನವೊಂದು ತಿಳಿಸಿದೆ.

ಕ್ಲೈ ಮಾ ಮೇ ಟ ರ್ ವಿಶ್ಲೇಷಣೆಯ ಪ್ರಕಾರ, ಮೇ ತಿಂಗಳಲ್ಲಿ ದೀರ್ಘವಾದ ಹಾಗೂ ತೀವ್ರವಾದ ಬಿಸಿಲ ಬೇಗೆ ಕಂಡು ಬಂದಿದೆ. ಇದಕ್ಕೆ ಜಾಗತಿಕ ವಿದ್ಯಮಾನವಾದ ಎಲ್ ನೀನೋ ಕಾರಣವಾಗಿದೆ. ಇದರ ಜೊತೆಗೆ ಹಸಿರು ಮನೆ ಪರಿಣಾಮವೂ ತಾಪಮಾನ ಹೆಚ್ಚಿಸಿದೆ.

ಪಳಿಯುಳಿಕೆ ಇಂಧನದ ಅತಿಯಾದ ಬಳಕೆಯಿಂದಾಗಿ ತಾಪಮಾನ ಹೆಚ್ಚಾಗುತ್ತಿದೆ. ಇದರಿಂದ ಬಿಸಿಗಾಳಿಯ ಪ್ರಕೋಪ ಭಾರತದಲ್ಲಿ ಮಿತಿ ಮೀರುವ ಮಟ್ಟಕ್ಕೆ ಹೋಗಿದೆ ಎಂದು ಕ್ಲೈಮಾಮೀಟರ್ ಅಧ್ಯಯನ ತಿಳಿಸಿದೆ.

ಎಲ್ ನೀನೋ ಹಾಗೂ ಮಾನವರಿಂದ ಆದ ಬದಲಾವಣೆ ಕಾರಣದಿಂದಾಗಿ, ಭಾರತದಲ್ಲಷ್ಟೇ ಅಲ್ಲದೇ ವಿಶ್ವದಾದ್ಯಂತ ಹವಾಮಾನ ವೈಪರೀತ್ಯವಾಗುತ್ತಿದೆ.

2023ರ ಜೂನ್ ನಂತರದಿಂದ ಮೇ 2024ರ ನಡುವೆ ಪ್ರತಿಯೊಂದು ತಿಂಗಳ ತಾಪಮಾನವೂ ಹಿಂದಿನ ಎಲ್ಲ ದಾಖಲೆಗಳನ್ನು ಮುರಿದಿದೆ ಎಂದು ಯುರೋಪ್ ಹವಾಮಾನ ಸಂಸ್ಥೆಯಾದ ಕೂಪರ್ನಿಕಸ್ ತಿಳಿಸಿದೆ.

## ನಂದಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾಗಿ ಜಿಗಳಿಯ ಗೌಡ್ರ ಬಸವರಾಜಪ್ಪ

### ಉಪಾಧ್ಯಕ್ಷರಾಗಿ ಕೊಕ್ಕನೂರಿನ ಆಂಜನೇಯ ಪಾಟೀಲ್



ಮಲೇಬೆನ್ನೂರು, ಜೂ. 7- ಇಲ್ಲಿನ ಶ್ರೀ ನಂದಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾಗಿ ಜಿಗಳಿಯ ಗೌಡ್ರ ಬಸವರಾಜಪ್ಪ ಮತ್ತು ಉಪಾಧ್ಯಕ್ಷರಾಗಿ ಕೊಕ್ಕನೂರಿನ ಕೆ.ಪಿ. ಆಂಜನೇಯ ಪಾಟೀಲ್ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹೆಚ್.ಟಿ. ಶಾಂತನಗೌಡ ಮತ್ತು ಎಂ.ವಿ. ನಾಗರಾಜ್ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳು ತೆರವಾಗಿದ್ದವು.

ಲೆಕ್ಕ ಪರಿಶೋಧನಾ ಇಲಾಖೆಯ ಸಹಾಯಕ ನಿರ್ದೇಶಕ ಓ. ಮಂಜುನಾಥ ಸ್ವಾಮಿ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಸಂಘದ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಜಿಗಳಿ ಇಂದೂಧರ್, ಹಳ್ಳಿಹಾಳ್ ಹೆಚ್.ಟಿ. ಶಾಂತನಗೌಡ್ರು, ಹೆಚ್. ವೀರನಗೌಡ, ನಿರ್ದೇಶಕರಾದ ಹೆಚ್.ಟಿ. ಪರಮೇಶ್ವರಪ್ಪ, ಸಂತೋಷ್ ಪಾಳೇದ್, ಶ್ರೀಮತಿ ಬಿ.ವಿ. ಶೋಭಾ ಪಾಲಾಕ್ಷಪ್ಪ, ಶ್ರೀಮತಿ ಸೌಭಾಗ್ಯ ಉದಯಕುಮಾರ್, ಎ. ಆರೀಫ್ ಅಲಿ, ಟಿ. ರಾಮಚಂದ್ರಪ್ಪ, ಆರ್. ನಾಗರಾಜ್, ಎ.ಕೆ. ತಿಪ್ಪೇಸ್ವಾಮಿ ಮತ್ತು ಸಂಘದ ಕಾರ್ಯದರ್ಶಿ ಹೆಚ್.ಎಂ. ಬಸವರಾಜ್ ಈ ವೇಳೆ ಹಾಜರಿದ್ದರು.

## ಜಗಳೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಜಗಳೂರು ತಾಲ್ಲೂಕಿನ ಬಿದರಕೆರೆ ಮತ್ತು ಜಗಳೂರು 66/11ಕೆವಿ ವಿ.ವಿ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಇಲ್ಲಿಂದ ಸರಬರಾಜಾಗುವ ಎಲ್ಲಾ ಮಾರ್ಗಗಳಲ್ಲಿ ಎನ್.ಜೆ.ವೈ ಮತ್ತು ಐ.ಪಿ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಸಿನಿಮಾ ಸಿರಿಯಿಂದ ಇಂದು ನಗರದಲ್ಲಿ ದ್ವಾರಕೀಶ್ ಅವರಿಗೆ 'ಗಾನ ನಮನ'



ದಾವಣಗೆರೆ, ಜೂ.7 - ನಗರದ ಸಿನಿಮಾ ಸಿರಿ ಸಂಸ್ಥೆಯಿಂದ ನಾಳೆ ದಿನಾಂಕ 8ರ ಶನಿವಾರ 'ಕಾಲವನ್ನು ತಡೆಯೋರು ಯಾರೂ ಇಲ್ಲ' ಶೀರ್ಷಿಕೆಯಡಿ ದಿ.ದ್ವಾರಕೀಶ್ ಅವರಿಗೆ ಗಾನ ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಪರಿಕಲ್ಪನಾ ನಿರ್ದೇಶಕ ಸುರಭಿ ಶಿವಮೂರ್ತಿ ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ಸಂಜೆ 6 ಗಂಟೆಯಿಂದ ಆರಂಭವಾಗುವ ಈ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದರು.

ಸಂಸ್ಥೆಯ 51ನೇ ಕಾರ್ಯಕ್ರಮವನ್ನು ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಿರ್ಮಾಪಕ, ನಿರ್ದೇಶಕ ಹೆಚ್.ಆರ್. ಭಾರ್ಗವ ಆಗಮಿಸಲಿದ್ದು, ಸಂಸ್ಥೆಯ ನೂತನ ಅಧ್ಯಕ್ಷ ಅಂದನೂರು ಮುಪ್ಪಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು. ನಾಲ್ಕು ಗಂಟೆಗಳ ಈ ಕಾರ್ಯಕ್ರಮದಲ್ಲಿ 25 ಕ್ಕೂ ಹೆಚ್ಚು ಗೀತೆಗಳನ್ನು ಗಾಯಕರು ಪ್ರಸ್ತುತಪಡಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಿನಿಮಾ ಸಿರಿ ಅಧ್ಯಕ್ಷ ಅಂದನೂರು ಮುಪ್ಪಣ್ಣ, ಖಜಾಂಚಿ ಎನ್.ವಿ. ಬಂಡಿವಾಡ, ಸಲಹಾ ಸಮಿತಿ ಸದಸ್ಯ ಡಾ.ಬಿ.ಎಸ್. ನಾಗಪ್ರಕಾಶ್, ಪರಿಕಲ್ಪನಾ ನಿರ್ದೇಶಕ ಹೆಚ್.ವಿ. ಮಂಜುನಾಥ ಸ್ವಾಮಿ, ಪದಾಧಿಕಾರಿಗಳಾದ ಮಲ್ಲಿಕಾರ್ಜುನ್, ಎಂ.ಜಿ. ಜಗದೀಶ್, ಸಾಲಿಗ್ರಾಮ ಗಣೇಶ ಶಣೈ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶಿವಗೋಷ್ಠಿ

ತರಳಬಾಳು ಬಡಾವಣೆಯ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ, ಶಿವಗೋಷ್ಠಿ ಸಮಿತಿ ಇವರ ಸಹಯೋಗದಲ್ಲಿ ಇಂದು ಸಂಜೆ 6.30 ಕ್ಕೆ ಶ್ರೀ ಮಾಗನೂರು ಬಸಪ್ಪ ಸಭಾಂಗಣದಲ್ಲಿ (ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜು) ಶಿವಗೋಷ್ಠಿ-306, ಸ್ಮರಣೆ-80 ಕಾರ್ಯಕ್ರಮ ನಡೆಯಲಿದೆ.

ಮಾಗನೂರು ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ್ರು ಅಧ್ಯಕ್ಷತೆ ವಹಿಸಲಿದ್ದು, 'ವಚನಗಳಲ್ಲಿ ಕೃಷಿ ಮತ್ತು ಅಧ್ಯಾತ್ಮ' ಕುರಿತು ಎವಿಕೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ರಣಧೀರ ಉಪನ್ಯಾಸ ನೀಡಲಿದ್ದಾರೆ.

ಲಿಂ. ಅಂಗಡಿ ರುದ್ರಪ್ಪ, ಲಿಂ. ಶರಣೆ ರುದ್ರಮ್ಮನವರ ಸ್ಮರಣೆಯನ್ನು ನಿವೃತ್ತ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಆರ್. ಸಿದ್ದೇಶಪ್ಪ ಮಾಡಲಿದ್ದಾರೆ. ಕದಳಿ ಮಹಿಳಾ ವೇದಿಕೆ ಸದಸ್ಯನಿಯರಿಂದ ವಚನ ಗಾಯನ ಕಾರ್ಯಕ್ರಮವಿರುತ್ತದೆ.

# ಮೋದಿಗೆ ಅಧಿಕಾರ ಬಿಟ್ಟು ಹೋಗಲು ಜನರು ಕೊಟ್ಟಿರುವ ಎಚ್ಚರಿಕೆ ಗಂಟೆ

ದಾವಣಗೆರೆ, ಜೂ.5- ಪ್ರಧಾನಿ ಮೋದಿಯೇ ಮತ ಎಣಿಕೆಯ ಹಲವಾರು ಸುತ್ತುಗಳಲ್ಲಿ ಹಿನ್ನಡೆ ಕಂಡಿದ್ದು ದೇಶದಲ್ಲಿ ಮೋದಿ ಅಲೆ ಇರಲಿಲ್ಲ ಎಂಬುದನ್ನು ಸಾರಿ ಹೇಳುತ್ತಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಹೇಳಿದ್ದಾರೆ.

ರಾಹುಲ್ ಗಾಂಧಿ ಅವರು ಸ್ಪರ್ಧಿಸಿದ್ದ ಎರಡೂ ಕ್ಷೇತ್ರಗಳಲ್ಲಿ ಜಯಬೇರಿ ಭಾರಿಸಿರುವುದನ್ನು ನೋಡಿದರೆ ದೇಶದ ಜನರು ಬದಲಾವಣೆ ಬಯಸಿರುವುದು ನಿಶ್ಚಿತವಾಗಿ ಕಂಡುಬರುತ್ತಿದೆ.

ನರೇಂದ್ರ ಮೋದಿ ಚುನಾವಣೆ ಪ್ರಚಾರ ದೀರ್ಘ ಕಾಲ ಮಾಡುವ ಸಲುವಾಗಿ ಚುನಾವಣಾ ಆಯೋಗವನ್ನು ದುರುಪಯೋಗ ಪಡಿಸಿಕೊಂಡು ಮೂರು ತಿಂಗಳ ಕಾಲ ಪ್ರಚಾರ ನಡೆಸಿದರು. ಕಾಂಗ್ರೆಸ್ ಪಕ್ಷದ ಬ್ಯಾಂಕ್ ಖಾತೆಗಳನ್ನು ಸೀಜ್ ಮಾಡಿ ಕಿರುಕುಳ ನೀಡಿದರು. ದ್ವೇಷ ಭಾಷಣ ಮಾಡಿ ಹಿಂದೂ, ಮುಸ್ಲಿಂ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡಿದರು. ಮೋದಿ ಚುನಾವಣೆ ಪ್ರಚಾರ ಸಭೆಗಳಲ್ಲಿ ತಾನು ದೇವ ಮಾನವ ಎಂದು ಸ್ವಯಂ ಘೋಷಣೆ ಮಾಡಿಕೊಂಡರು. 2047ರ ತನಕ ತಾನೇ ಪ್ರಧಾನಿಯಾಗಿರುತ್ತೇನೆ ಎಂದು ಭಾಷಣ ಮಾಡಿದರು. ಸರ್ಕಾರಿ ಯಂತ್ರ ದುರುಪಯೋಗ ಪಡಿಸಿಕೊಂಡು ದೇಶ ಸುತ್ತಿದರು. ಆದರೂ ಇಂದಲ್ಲಾ ನಾಳೆ ಮೋದಿಯನ್ನು ಅಧಿಕಾರದಿಂದ ಇಳಿಸುವುದು ಗ್ಯಾರಂಟಿ ಎಂದು ಜನರು ತೀರ್ಪು ನೀಡಿದ್ದಾರೆ. ಮೋದಿಗೆ ಅಧಿಕಾರ ಬಿಟ್ಟು ಹೋಗಲು ಜನ ಎಚ್ಚರಿಕೆ ಗಂಟೆ ಬಾರಿಸಿದ್ದಾರೆ ಎಂದು ಬಸವರಾಜ್ ತಿಳಿಸಿದ್ದಾರೆ.

**ಅಭಿನಂದನೆ :** ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಐತಿಹಾಸಿಕ ಗೆಲುವು ಸಾಧಿಸಿದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮತ್ತು ಮತ ನೀಡಿದ ಮತದಾರರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಕಾಂಗ್ರೆಸ್ ಗೆಲುವಿಗೆ ಶ್ರಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲೆಯ ಶಾಸಕರು, ಪ್ರಚಾರ ಮಾಡಿದ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಪ್ರಿಯಾಂಕ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಡಾ. ಜಿ. ಪರಮೇಶ್ವರ್, ವಿಧಾನ ಪರಿಷತ್ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್, ಹೆಚ್ ಎಂ ರೇವಣ್ಣ, ಹೆಚ್ ಆಂಜನೇಯ ಸೇರಿದಂತೆ ಕಾಂಗ್ರೆಸ್ ನಾಯಕರಿಗೂ ಡಿ. ಬಸವರಾಜ್ ಧನ್ಯವಾದ ಅರ್ಪಿಸಿದ್ದಾರೆ.

## ಸ್ವರ್ಣ ಭಾರತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಯಿಂದ ಪರಿಸರ ದಿನಾಚರಣೆ



ದಾವಣಗೆರೆ, ಜೂ. 6 - ಆಂಜನೇಯ ಬಡಾವಣೆಯ 13ನೇ ಕ್ರಾಸ್‌ನ ಜೀವ ಆಯುರ್ವೇದ ಆಸ್ಪತ್ರೆಯ ಎದುರುಗಡೆ ಇರುವ ಪಾರ್ಕ್‌ನಲ್ಲಿ ನಮ್ಮ 'ಸ್ವರ್ಣ ಭಾರತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ' ವತಿಯಿಂದ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಭಾರತಿ ಕೇಶವ ಮೂರ್ತಿ ಅವರ ನೇತೃತ್ವದಲ್ಲಿ ಹೂ ಮತ್ತು ಹಣ್ಣಿನ ಗಿಡಗಳನ್ನು ನೆಡಲಾಯಿತು. ನೆಟ್ಟ ಗಿಡಗಳನ್ನು ಉಳಿಸಿ ಬೆಳೆಸುವುದು ಮತ್ತು ಅವುಗಳಿಂದ ಪಕ್ಷಿಗಳಿಗೆ ಮತ್ತು ನಮಗೆ ಹೇಗೆ ಉಪಯುಕ್ತ ಎಂಬುದನ್ನು ವಿವರಿಸುತ್ತಾ ಈ ವರ್ಷದ ಬಿಸಿಲಿನ ಬೇಗೆಯನ್ನು ನೆನಸುತ್ತ ಗಿಡಗಳನ್ನು ಉಳಿಸುವ ಮತ್ತು ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಮನವರಿಕೆ ಮಾಡಿ ಕೊಟ್ಟರು.

ಇದರೊಂದಿಗೆ ದಾವಣಗೆರೆ ನೇತ್ರಾಲಯದಿಂದ ಅಭಿಜಿತ್ ಜಿ.ಎಂ. ಅವರು ಕಾರ್ಯಕ್ರಮಕ್ಕೆ ಆಗಮಿಸಿ ಕಣ್ಣಿನ ಮಹತ್ವದ ಬಗ್ಗೆ ತಿಳಿಸಿದರಲ್ಲದೆ ಉಚಿತ ತಪಾಸಣೆಯ ಕೂಪನ್‌ಗಳನ್ನು ಸಂಸ್ಥೆಯ ಎಲ್ಲಾ ಸದಸ್ಯರಿಗೆ ಹಂಚಿದರು.

ಸ್ವರ್ಣ ಭಾರತಿ ಸಂಸ್ಥೆಯ ನಿರ್ದೇಶಕ ವಿಜಯ. ಪಿ.ಹೆಚ್., ದಿವ್ಯಾ, ಪುಷ್ಪ, ಚಂದ್ರಿಕಾ, ವೇಣುಗೋಪಾಲ್, ವಿದ್ಯಾ ಎಸ್.ಬಿ., ಕವಿತಾ ಕೊಟ್ರಬಸಪ್ಪ, ತನುಜಾ ಮತ್ತು ಎಲ್ಲಾ ಸದಸ್ಯನಿಯರ ಉಪಸ್ಥಿತರಿದ್ದರು.

## ಓದುಗರ ಪತ್ರ

### ನ್ಯಾಯಾಲಯ ದ್ವಾರದ ಮುಂದೆ ತುಂಬಿ ಹರಿಯುವ ಒಳಚರಂಡಿ ನೀರು



ಮಾನ್ಯರೇ,


ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ನ್ಯಾಯಾಲಯಗಳ ಸಂಕೀರ್ಣದ ಪ್ರವೇಶ ದ್ವಾರದಲ್ಲಿ ಇರುವ ಒಳಚರಂಡಿ ತುಂಬಿ ಹರಿಯುತ್ತಿದೆ. ಇದನ್ನು ದಾಟಿಕೊಂಡು ಹೋಗುವವರಿಗೆ ಆಗುವ ಸಮಸ್ಯೆ ವಿಪರೀತವಾದದ್ದು. ಕಣ್ಣ ಮುಂದೆ ಇರುವ ಸಮಸ್ಯೆಗೆ ಕನ್ನಡಿ ಏತಕ್ಕೆ ? ಇಲ್ಲಿಗೆ ಬರುವ ಕಕ್ಷಿದಾರರಿಂದ ಹಿಡಿದು ಅವರ ಪರವಾಗಿ ವಕಾಲತ್ತು ವಹಿಸುವ ವಕೀಲರಿಗೆ ಈ ನೀರಿನಿಂದ ನಿತ್ಯ ಗೋಳು ಎದುರಾಗಿದೆ. ಈ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ಶೀಘ್ರವಾಗಿ ಕಂಡುಕೊಳ್ಳಬೇಕಿದೆ. ಸ್ಮಾರ್ಟ್ ಸಿಟಿ ಯೋಜನೆಯವರು ಅಥವಾ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಈ ಒಳಚರಂಡಿಯ ಮುಚ್ಚಳವನ್ನು ಸಂಪೂರ್ಣವಾಗಿ ಮುಚ್ಚಿಸಿ, ಸ್ವಲ್ಪ ದೂರದಲ್ಲಿ ಜಂಕ್ಷನ್ ಬಾಕ್ಸ್ ತೆರೆದು, ಮುಚ್ಚಳ ಹಾಕುವ ಹಾಗೇ ಮಾಡಿದರೆ ನ್ಯಾಯಾಲಯಗಳ ಸಂಕೀರ್ಣಕ್ಕೆ ಬರುವ ಪ್ರತಿಯೊಬ್ಬರಿಗೂ ಅನುಕೂಲವಾಗುತ್ತದೆ. ಜೊತೆಗೆ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಲು ಚರಂಡಿಯ ಕಸ ಶೇಖರಣೆಯನ್ನು ನಿರ್ಮೂಲನೆ ಮಾಡಿಸಿದಲ್ಲಿ ಸಾರ್ವಜನಿಕರಿಗೆ ಸಹಕಾರಿ ಆಗುತ್ತದೆ.

- ವಾದಿರಾಜ ಭಟ್ ವೈ., ವಕೀಲರು, ದಾವಣಗೆರೆ.

## ಮರು ಮೌಲ್ಯಮಾಪನದ ನಂತರ ಶಾಲೆಗೆ ಪ್ರಥಮ ಸ್ಥಾನ

ದಾವಣಗೆರೆ, ಜೂ. 7 - 2024 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಮರು ಮೌಲ್ಯಮಾಪನದಲ್ಲಿ ನಗರದ ಮಾಗನೂರು ಬಸಪ್ಪ ಪ್ರೌಢಶಾಲೆಯ ವಿದ್ಯಾರ್ಥಿ ಧನುಷ್ ಕೆ. 607 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಹಿಂದಿ ಮತ್ತು ಸಮಾಜ ವಿಜ್ಞಾನ ವಿಷಯದಲ್ಲಿ ಕಡಿಮೆ ಅಂಕ ಬಂದಿದೆ ಎಂದು ಉತ್ತರ ಪತ್ರಿಕೆ ತರಿಸಿ ಮರು ಮೌಲ್ಯಮಾಪನಕ್ಕೆ ಕಳುಹಿಸಿಕೊಡಲಾಗಿತ್ತು. ಮರು ಮೌಲ್ಯಮಾಪನದಲ್ಲಿ ಹಿಂದಿ ವಿಷಯದಲ್ಲಿ 11 ಮತ್ತು ಸಮಾಜ ವಿಜ್ಞಾನ ವಿಷಯಕ್ಕೆ 5 ಅಂಕಗಳು ಹೆಚ್ಚುವರಿಯಾಗಿ ಬಂದಿವೆ.

## ಜಾನಪದ ವಿದ್ವಾಂಸ ನಾಳೆ ಡಾ.ಎಂ.ಜಿ. ಈಶ್ವರಪ್ಪ ಅವರಿಗೆ ನುಡಿ ನಮನ



ದಾವಣಗೆರೆ, ಜೂ. 7- ಪ್ರತಿಮಾ ಸಭಾದ ವತಿಯಿಂದ ನಾಡಿದ್ದು ದಿನಾಂಕ 9 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಸಾಹಿತಿ, ರಂಗಕರ್ಮಿ, ಜಾನಪದ ವಿದ್ವಾಂಸ ಹಾಗೂ ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕರಾಗಿದ್ದ ಡಾ.ಎಂ.ಜಿ. ಈಶ್ವರಪ್ಪ ಅವರಿಗೆ 'ನುಡಿ ನಮನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಮಾ ಸಭಾದ ಕೋಶಾಧ್ಯಕ್ಷ ಬಿ.ಎನ್. ಮಲ್ಲೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿಮಾಸಭಾದ ಸಂಸ್ಥಾಪಕ ಅಧ್ಯಕ್ಷ ಪ್ರೊ.ಎಸ್. ಹಾಲಪ್ಪ ಅಧ್ಯಕ್ಷತೆ ವಹಿಸುವರು. ಹಿರಿಯ ರಂಗಕರ್ಮಿ, ಸಾಂಸ್ಕೃತಿಕ ಸಂಘಟಕ ಶ್ರೀನಿವಾಸ್ ಜಿ. ಕಪ್ಪಣ್ಣ, ಹಿರಿಯ ಕಾದಂಬರಿಕಾರ ಕುಂ. ವೀರಭದ್ರಪ್ಪ, ಪ್ರತಿಮಾ ಸಭಾದ ಸಂಸ್ಥಾಪಕ ನಿರ್ದೇಶಕ ಪ್ರೊ.ಜಿ.ಎನ್. ಸತ್ಯಮೂರ್ತಿ ಅವರು ನುಡಿ ನಮನ ಸಲ್ಲಿಸಲಿದ್ದಾರೆ.

ದಿ. ಡಾ.ಎಂ.ಜಿ.ಈಶ್ವರಪ್ಪ ಅವರ ಪತ್ನಿ ಶ್ರೀಮತಿ ಬಸಮ್ಮ, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಜರುಗಲಿದೆ. ಗಾನ ಲಹರಿ ಸಂಗೀತ ವಿದ್ಯಾಲಯದ ಕಲಾವಿದರು ರಂಗ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ಇದೇ ವೇಳೆ ಈಶ್ವರಪ್ಪ ಅವರ ಒಡನಾಡಿಗಳು ಪುಷ್ಪ ನಮನ ಸಲ್ಲಿಸಲಿದ್ದಾರೆ ಎಂದರು.

ಪ್ರತಿಮಾ ಸಭಾದ ಪದಾಧಿಕಾರಿಗಳಾದ ಬಾ.ಮ.ಬಸವರಾಜಯ್ಯ, ಬಿ.ಎನ್. ಮಲ್ಲೇಶ್, ಎಸ್.ಎಸ್. ಸಿದ್ಧರಾಜ್, ಎನ್.ಟಿ. ಮಂಜುನಾಥ್, ಶಂಭಣ್ಣ, ರವೀಂದ್ರ ಅರಳಗುಪ್ಪಿ, ನಾಗರಾಜ್ ಸಿರಿಗೆರೆ ಮತ್ತಿತರರು ಕಾರ್ಯಕ್ರಮದ ನಿರ್ವಹಣೆ ಜವಾಬ್ದಾರಿ ಹೊತ್ತಿದ್ದಾರೆ ಎಂದು ಮಾಹಿತಿ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಬಾ.ಮ. ಬಸವ ರಾಜಯ್ಯ, ಎಸ್.ಎಸ್. ಸಿದ್ಧರಾಜ್, ಎನ್.ಟಿ. ಮಂಜುನಾಥ್, ಶಂಭಣ್ಣ ಉಪಸ್ಥಿತರಿದ್ದರು.

## ನಗರದಲ್ಲಿ ಸಾಯಿ ಕಲೆಕ್ಷನ್ಸ್ ಎಕ್ಸಿಬಿಷನ್



ದಾವಣಗೆರೆ, ಜೂ. 7- ಎಕ್ಸಿಬಿಷನ್ ಸಂಸ್ಥೆ ಸಾಯಿ ಕಲೆಕ್ಷನ್ ನಿಂದ ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಸೀರೆ, ಸಲ್ವಾರ್ ಸೂಟ್‌ಗಳು ಮುಂತಾದ ಸಂಗ್ರಹಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿದೆ.

ಈ ಪ್ರದರ್ಶನ ಇಂದು ಪ್ರಾರಂಭವಾಗಿದ್ದು ನಾಳೆ ದಿನಾಂಕ 8ರ ಶನಿವಾರ ಮುಕ್ತಾಯಗೊಳ್ಳಲಿದೆ. ನವ-ನವೀನ ಮಾದರಿಯ ವಿನ್ಯಾಸದ ಅಜತ್, ಮುದಾಲ್ ಸಿಲ್ಕ್ ಸ್ಯಾರೀಸ್, ಜಾರ್ಜೆಟ್, ಆರ್ಗ್ಯಾಂಜಾ, ಬನರಾಸ್ ಮುಂತಾದ ವಸ್ತು ವೈವಿಧ್ಯಗಳನ್ನು ಇಲ್ಲಿ ಖರೀದಿಸಬಹುದಾಗಿದೆ.

## ನಗರದಲ್ಲಿ ನಾಡಿದ್ದು ವಿದ್ಯುತ್ ವ್ಯತ್ಯಯ

ದಾವಣಗೆರೆ, ಜೂ.7 - ಇದೇ ದಿನಾಂಕ ಜೂ.10 ರಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಸಿದ್ದವೀರಪ್ಪ ಬಡಾವಣೆಯ 9, 10, 11, 12, 13 ಮತ್ತು 14ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.


**ಉಚಿತ ಚಿಕಿತ್ಸಾ ಶಿಬಿರ**

ಮುಖದಲ್ಲಿ ಮೊಡವೆ, ಅಲರ್ಜಿ, ತುರಿಕೆ, ದೇಹದಲ್ಲಿ ಗುಳ್ಳೆಗಳು, ಕೀವು ಇತ್ಯಾದಿ ಸೋಂಕಿನಿಂದ ನರಳುತ್ತಿದ್ದರೆ ನಮ್ಮಲ್ಲಿದೆ ಉಚಿತ ಸಂದರ್ಶನ ಹಾಗೂ ಔಷಧಿ ವಿತರಣ ಚಿಕಿತ್ಸಾ ಶಿಬಿರ.

**ಶಿಬಿರದ ದಿನಾಂಕ : 10.06.2024 ರಿಂದ 18.06.2024**

**ಸಮಯ : ಬೆಳಿಗ್ಗೆ 10 ರಿಂದ 2 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ : **ಅನ್ವಯ ಆಯುರ್ವೇದ ಚಿಕಿತ್ಸಾಲಯ**

#1288, 'ಹಂಜಿ ನಿಲಯ', 8ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.

**ಫೋ. : 63643 21664, 08192 452312**

ಈ ಚೀಟಿ ತಗೆದುಕೊಂಡು ಬಂದರೆ ಶೇ. 15 ರಷ್ಟು ಚಿಕಿತ್ಸೆ ಯಲ್ಲಿ ರಿಯಾಯಿತಿ ಇರುತ್ತದೆ

## ಬಡ್ಡಿ ದರ ಕಡಿತದ ಕೂಗಿಗೆ ಹೆಚ್ಚಿದ ಬಲ

ಮುಂಬೈ, ಜೂ. 7 - ರಿಸರ್ವ್ ಬ್ಯಾಂಕ್‌ನಲ್ಲಿ ಬಡ್ಡಿ ದರ ಕಡಿತದ ಕೂಗು ಹೆಚ್ಚಾಗಿದೆ. ರಿಸರ್ವ್ ಬ್ಯಾಂಕ್ ಹಣಕಾಸು ನೀತಿಯ ಸಮಿತಿಯ ಹೊರಗಿನ ಸದಸ್ಯೆ ಅಶಿಮಾ ಗೋಯಲ್ ಸಹ ಬಡ್ಡಿ ದರ ಕಡಿತದ ಪರ ನಿಲುವು ತಳೆದಿದ್ದಾರೆ. ಈ ಹಿಂದೆ ಇನ್ನೋರ್ವ ಸದಸ್ಯ ಜಯಂತ್ ಆರ್. ವರ್ಮ ಸಹ ಬಡ್ಡಿ ದರ ಕಡಿತದ ಪರ ನಿಲುವು ತಳೆದಿದ್ದರು.

ಆದರೆ, ಉಳಿದ ಸದಸ್ಯರಾದ ಶಶಾಂಕ ಭಿಡೆ, ರಾಜೀವ್ ರಂಜನ್, ಮೈಖೆಲ್ ದೇಬಬ್ರತ ಪಾತ್ರ ಹಾಗೂ ಶಕ್ತಿಕಾಂತ ದಾಸ್ ಅವರು ಬಡ್ಡಿ ದರವನ್ನು ಶೇ.6.50ರ ಹಂತದಲ್ಲೇ ಮುಂದುವರೆಸಬೇಕು ಎಂದು ಬಯಸಿದ್ದರು. ಗೋಯಲ್, ವರ್ಮ ಹಾಗೂ ಭಿಡೆ ಅವರು ಹೊರಗಿನ ಸದಸ್ಯರಾಗಿದ್ದಾರೆ. ರಂಜನ್, ಪಾತ್ರ ಹಾಗೂ ದಾಸ್ ಅವರು ಆರ್.ಬಿ.ಐ. ಅಧಿಕಾರಿಗಳಾಗಿದ್ದಾರೆ.

ಕಳೆದ ಫೆಬ್ರವರಿ ಹಾಗೂ ಡಿಸೆಂಬರ್‌ನಲ್ಲಿ ನಡೆದ ಸಭೆಗಳಲ್ಲೂ ವರ್ಮ ಬಡ್ಡಿ ದರ ಕಡಿತದ ಪರವಾಗಿದ್ದರು. ಬಡ್ಡಿ ದರವನ್ನು 25 ಮೂಲ ಅಂಕಗಳಷ್ಟು ಕಡಿತ ಮಾಡಬೇಕೆಂದು ಅವರು ಪ್ರತಿಪಾದಿಸಿದ್ದರು. ಅವರ ನಿಲುವಿಗೆ ಗೋಯಲ್ ಸಹ ಬೆಂಬಲಿಸಿದ್ದಾರೆ. ಆರು ಸದಸ್ಯರ ಹಣಕಾಸು ನೀತಿ ಸಮಿತಿಯಲ್ಲಿ ಬಹುಮತದ ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

## ಷೇರುಪೇಟೆ : ಶುಕ್ರವಾರವೂ ಉತ್ಸಾಹ

ಮುಂಬೈ, ಜೂ. 7 – ಶುಕ್ರವಾರ ಷೇರುಪೇಟೆಯಲ್ಲಿ ಏರಿಕೆ ಕಂಡು ಬಂದಿದ್ದು, ಮುಂಬೈ ಷೇರು ಸೂಚ್ಯಂಕ 76,795.31ರ ಹಂತಕ್ಕೆ ತಲುಪಿದೆ.

ಷೇರು ಸೂಚ್ಯಂಕ 1,720.8 ಅಂಕಗಳ ಏರಿಕೆ ಕಂಡಿತ್ತು. ಅಂತಿಮವಾಗಿ 76,693.36 ಅಂಕಗಳ ಅಂತರದಲ್ಲಿ ಅಂತ್ಯವಾಯಿತು. ಇದು ಶೇ.2.16ರ ಏರಿಕೆಯಾಗಿದೆ. ಎನ್.ಎಸ್.ಇ. ನಿಫ್ಟಿ ಸೂಚ್ಯಂಕ ಸಹ ಶೇ.2.05ರ ಏರಿಕೆ ಕಂಡು 23,290.15 ರ ಹಂತದಲ್ಲಿ ಅಂತ್ಯವಾಗಿದೆ. ಐ.ಟಿ., ರಿಯಾಲ್ಟಿ ಹಾಗೂ ಆಟೋ ವಲಯಗಳಲ್ಲಿ ಉತ್ಸಾಹ ಕಂಡು ಬಂದಿದೆ. ರಿಸರ್ವ್ ಬ್ಯಾಂಕ್ ತನ್ನ ಹಣಕಾಸು ನೀತಿ ಪರಾಮರ್ಷೆಯಲ್ಲಿ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡಿದೆ. ಈ ವರ್ಷ ಆರ್ಥಿಕ ಬೆಳವಣಿಗೆ ಶೇ.7.2ರಷ್ಟಿರಲಿದೆ ಎಂದು ತಿಳಿಸಿದೆ. ಇದು ಷೇರುಪೇಟೆಯಲ್ಲಿ ಉತ್ಸಾಹಕ್ಕೆ ಕಾರಣವಾಗಿದೆ.

## ತಾಲ್ಲೂಕು ಪಂಚಾಯಿತಿ ಕಚೇರಿ ಸ್ಥಳಾಂತರ

ದಾವಣಗೆರೆ, ಜೂ.7 - ದಾವಣಗೆರೆ ತಾಲ್ಲೂಕು ಪಂಚಾಯಿತಿ ಕಚೇರಿಯನ್ನು ಜಿಲ್ಲಾ ಪಂಚಾಯತ್ ಹತ್ತಿರ ದೂರದರ್ಶನ ಕೇಂದ್ರದ ಪಕ್ಕದಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಸ್ಥಳಾಂತರಿಸಲಾಗಿರುತ್ತದೆ. ಜೂ.10 ರ ನಂತರ ಕಚೇರಿಗೆ ಸಂಬಂಧಿಸಿದ ಪತ್ರ ವ್ಯವಹಾರವನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ.ದಾವಣಗೆರೆ, ಜಿ.ಪಂ. ಕಚೇರಿ ಹತ್ತಿರ, ದೂರದರ್ಶನ ಕೇಂದ್ರದ ಪಕ್ಕ, ಲೋಕಿಕೆರೆ ರಸ್ತೆ, ದಾವಣಗೆರೆ ಈ ವಿಳಾಸಕ್ಕೆ ಕಳುಹಿಸಲು ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

### 35ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಯುತ ಡಿ. ದುಗ್ಗಪ್ಪನವರು

ನೀವು ನಮ್ಮನ್ನಗಲಿ ಇಂದಿಗೆ 35 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಹಾದಿಯಲ್ಲಿ ಮುನ್ನಡೆಯುತ್ತಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,

ಮಗ : ಶ್ರೀ ಡಿ.ಡಿ.ಬಸವರಾಜಪ್ಪ,
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮರಿ ಮೊಮ್ಮಕ್ಕಳು, ದಾವಣಗೆರೆ.

## ಯುಪಿಐ ಲೈಟ್‌ನಲ್ಲಿ ಸ್ವಯಂ ಚಾಲಿತ ಜಮಾಗೆ ಪ್ರಸ್ತಾಪ

ಮುಂಬೈ, ಜೂ. 7 - ಯು.ಪಿ.ಐ. ಲೈಟ್ ವ್ಯಾಲೆಟ್‌ಗಳಿಗೆ ಸ್ವಯಂ ಚಾಲಿತವಾಗಿ ಹಣ ತುಂಬುವ ವ್ಯವಸ್ಥೆ ಜಾರಿಗೆ ತರಲು ರಿಸರ್ವ್ ಬ್ಯಾಂಕ್ ಪ್ರಸ್ತಾಪಿಸಿದೆ. ಸಣ್ಣ ಮೊತ್ತದ ಹಣದ ಪಾವತಿಗೆ ಯು.ಪಿ.ಐ. ಲೈಟ್ ಬಳಸಲಾಗುತ್ತದೆ. ಈ ಮೂಲಕ ಪ್ರತಿದಿನ ಗರಿಷ್ಠ 2,000 ರೂ. ಹಣ ಪಾವತಿ ಮಾಡಬಹುದು. ಒಂದು ಬಾರಿಗೆ ಗರಿಷ್ಠ 500 ರೂ. ಮಾತ್ರ ಪಾವತಿಸಬಹುದು. ಯು.ಪಿ.ಐ. ಬಳಕೆ ಹೆಚ್ಚಿಸಲು ಉತ್ತೇಜನ ನೀಡುವ ಸಲುವಾಗಿ, ಗ್ರಾಹಕರು ಸ್ವಯಂ ಚಾಲಿತವಾಗಿ ಯು.ಪಿ.ಐ ಲೈಟ್ ವ್ಯಾಲೆಟ್‌ಗೆ ಹಣ ತುಂಬುವ ಆಯ್ಕೆ ನೀಡಲು ಪ್ರಸ್ತಾಪಿಸಲಾಗಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

### ವಿದೇಶ ಪ್ರಯಾಣ ಶುಭ ಹಾರೈಕೆ



ನವೀನ ಟಿ.ಎಸ್.
Lead Anti Fraud Specialist
ಇವರು ಎರಡನೇ ಬಾರಿಗೆ ಕಾರ್ಪೊರೇಟ್ ಬಿಸಿನೆಸ್ ಟ್ರಿಪ್‌ಗೆ ಪ್ಯಾರಿಸ್, ಫ್ರಾನ್ಸ್‌ಗೆ ದಿನಾಂಕ : 08.06.2024 ರಂದು ನವದೆಹಲಿಯಿಂದ ಫ್ರಾನ್ಸ್ ದೇಶಕ್ಕೆ ಪ್ರಯಾಣ ಬೆಳೆಸಲಿದ್ದಾರೆ. ಇವರ ಪ್ರಯಾಣ ಸುಖಕರವಾಗಿರಲೆಂದು ಶುಭ ಹಾರೈಸುವವರು

ಡಾ. ಕೆ. ಸಿದ್ದಪ್ಪ
Physician,
Retired Medicine Professor
ಮತ್ತು ಕುಟುಂಬದವರು.

### ಹೃದಯಪೂರ್ವಕ ಅಭಿನಂದನೆಗಳು





ದಾವಣಗೆರೆ ಲೋಕಸಭಾ ಕ್ಷೇತ್ರದ ನೂತನ ಸಂಸದರಾಗಿ ಚುನಾಯಿತರಾಗಿರುವ
ಡಾ. ಪ್ರಭಾ ಎಸ್.ಎಸ್. ಮಲ್ಲಿಕಾರ್ಜುನ್
ಅವರಿಗೆ ಹಾರ್ದಿಕ ಅಭಿನಂದನೆಗಳು

ದಾವಣಗೆರೆ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘ ನಿ.,
ಆರ್.ಎಂ.ಸಿ. ರಸ್ತೆ, ದಾವಣಗೆರೆ. ಫೋ. : 08192-254435



ಹೆಚ್. ಮೃತ್ಯುಂಜಯಪ್ಪ, ಅಧ್ಯಕ್ಷರು
ಜಿ.ಸಿ. ಹನುಮಂತಪ್ಪ, ಉಪಾಧ್ಯಕ್ಷರು
ಬಿ.ಆರ್. ವೀರಪ್ಪ, ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರು
ಕೆ.ಎಂ. ರೇವಣಸಿದ್ದಪ್ಪ, ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರು
ಹೆಚ್. ಪರಮೇಶ್ವರಪ್ಪ, ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರು
ಟಿ. ಮಂಜುನಾಥ್, ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರು



ಟಿ.ಎಂ. ಬಸವರಾಜ್, ಮಾಜಿ ಉಪಾಧ್ಯಕ್ಷರು ಹಾಲಿ ನಿರ್ದೇಶಕರು
ಟಿ. ರಾಜಣ್ಣ, ನಿರ್ದೇಶಕರು
ಶ್ರೀಮತಿ ರೇಖಾ ಷಣ್ಮುಖಪ್ಪ, ನಿರ್ದೇಶಕರು
ಶ್ರೀಮತಿ ಪುಷ್ಪ ಕೋಂ. ಮೂರ್ತಿ ., ನಿರ್ದೇಶಕರು
ಶ್ರೀಕೃಷ್ಣ, ನಿರ್ದೇಶಕರು
ಹೆಚ್. ಶಿವಕುಮಾರ್, ನಿರ್ದೇಶಕರು
ಡಿ.ಎನ್. ದಿಳ್ಳೆಪ್ಪ, ನಿರ್ದೇಶಕರು

ಹಾಗೂ ಸಿಬ್ಬಂದಿ ವರ್ಗ

### ಹೃದಯಪೂರ್ವಕ ಅಭಿನಂದನೆಗಳು





ದಾವಣಗೆರೆ ಲೋಕಸಭಾ ಕ್ಷೇತ್ರದ ನೂತನ ಸಂಸದರಾಗಿ ಚುನಾಯಿತರಾಗಿರುವ
ಡಾ. ಪ್ರಭಾ ಮಲ್ಲಿಕಾರ್ಜುನ್
ಅವರಿಗೆ ಹಾರ್ದಿಕ ಅಭಿನಂದನೆಗಳು

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.
ನಿರ್ದೇಶಕ ಮಂಡಳಿ ಸದಸ್ಯರು,
ವ್ಯವಸ್ಥಾಪನ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ



ಡಾ. ಎ.ಎಸ್. ವೀರಣ್ಣ, ನಿರ್ದೇಶಕರು
ಡಾ. ಬಿ.ಎಸ್. ರೆಡ್ಡಿ, ನಿರ್ದೇಶಕರು
ಡಾ. ಷಂಶಾದ್ ಬೇಗಂ, ನಿರ್ದೇಶಕರು
ಡಾ. ಹೆಚ್. ಶಿವಪ್ಪ, ನಿರ್ದೇಶಕರು
ಡಾ|| ಪಿ. ಶಶಿಕಲಾ, ನಿರ್ದೇಶಕರು
ಡಾ. ಬಿ. ಪೂರ್ಣಿಮಾ, ನಿರ್ದೇಶಕರು



ಡಾ. ಕೆ. ಹನುಮಂತಪ್ಪ, ನಿರ್ದೇಶಕರು
ಡಾ|| ಅರುಣ್‌ಕುಮಾರ್, ನಿರ್ದೇಶಕರು
ಡಾ. ಸಿ.ವೈ. ಸುದರ್ಶನ್, ನಿರ್ದೇಶಕರು
ಡಾ|| ಎಂ.ಎಂ. ಲಿಂಗರಾಜ್, ನಿರ್ದೇಶಕರು
ಶ್ರೀ ಕೆ. ಬೊಮ್ಮಣ್ಣ, ನಿರ್ದೇಶಕರು
ಶ್ರೀ ಕೆ.ಎಸ್. ವೀರೇಶ್, ನಿರ್ದೇಶಕರು
ಡಾ. ಜಿ.ಎಸ್. ಯತೀಶ್, ವ್ಯವಸ್ಥಾಪನ ಮಂಡಲಿ ಸದಸ್ಯರು
ಡಾ. ಜಿ.ವೈ. ವಿಶ್ವನಾಥ್, ವ್ಯವಸ್ಥಾಪನ ಮಂಡಲಿ ಸದಸ್ಯರು
ಕು. ಜೆ. ಅನಿತಾಕುಮಾರಿ, ವ್ಯವಸ್ಥಾಪನ ಮಂಡಲಿ ಸದಸ್ಯರು
ಶ್ರೀ ಎಂ. ಬಸವರಾಜ್, ಪ್ರಧಾನ ವ್ಯವಸ್ಥಾಪಕರು

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas